
# ಪದ್ಯಗಳ ಸಾರಾಂಶ ಕೈಪಿಡಿ

## ಪ್ರಥಮ ಭಾಷೆ–ಸಿರಿಕನ್ನಡ

### ಹತ್ತನೆಯ ತರಗತಿ






ಪರಿಕಲ್ಪನೆ ಮತ್ತು ಸಂಯೋಜನೆ

*****

ಬಸವರಾಜ.ಟಿ.ಎಂ

ಕನ್ನಡ ಭಾಷಾ ಶಿಕ್ಷಕರು

ಸರ್ಕಾರಿ ಪ್ರೌಢಶಾಲೆ,ರೂಪನಗುಡಿ

ಬಳ್ಳಾರಿ ಪೂರ್ವವಲಯ, ಬಳ್ಳಾರಿ ಜಿಲ್ಲೆ

## ಮೊದಲ ಮಾತು

ಆತ್ಮೀಯ ಗುರು ವೃಂದವೆ ಪಾಠ ಬೋಧನೆಗೂ ಮುನ್ನ ಪಾಠ ಸಿದ್ಧತೆಯನ್ನು ರೂಡಿಸಿಕೊಳ್ಳುವುದು ನಮ್ಮ ಮೊದಲ ಆದ್ಯತೆಯಾಗಿದೆ. ಪದ್ಯಗಳು ಆಂತರಿಕವಾಗಿ ಕೆಲವೊಂದು ವಿಷಯಗಳನ್ನು ಅಡಗಿಸಿಕೊಂಡಿರುತ್ತವೆ. ಅಂತಹ ವಿಷಯಗಳನ್ನು ಮೊದಲೆ ತಿಳಿದುಕೊಂಡು ಪದ್ಯಬೋಧನೆ ಮಾಡುವುದು ನಮ್ಮ ಲಕ್ಷಣ. ನನಗೆ ಗೋಚರಿಸಿದ ಮಟ್ಟಿಗೆ ಕೆಲವು ಆಕಾರ ಸಂಪನ್ಮೂಲಗಳನ್ನು ಇಟ್ಟು ಕೊಂಡು ತಿಳಿಸಲು ಪ್ರಯತ್ನಿಸಿದ್ದೇನೆ. ತಪ್ಪುಗಳಿದ್ದಲ್ಲಿ ತಿಳಿಸಿ ಉತ್ತಮ ಸಂಪನ್ಮೂಲಕ್ಕಾಗಿ ಸಿದ್ಧರಾಗೋಣ. ಹತ್ತನೆಯ ತರಗತಿಯ ಎಲ್ಲಾ ಪದ್ಯಗಳನ್ನು ನನ್ನ ಬೋಧನೆಗೆ ಸಿದ್ಧಪಡಿಸಿಕೊಂಡಿದ್ದ ಸಂಪನ್ಮೂಲಗಳನ್ನು ನಿಮ್ಮೊಂದಿಗೆ ಹಂಚಿಕೊಳ್ಳಲು ಸಂತೋಷವಾಗುತ್ತಿದೆ.

### ಆಕಾರ ಸಂಪನ್ಮೂಲಗಳು


ಹತ್ತನೆಯ ತರಗತಿ ಸಿರಿ ಕನ್ನಡ ಪಠ್ಯಪುಸ್ತಕ
ಹತ್ತನೆಯ ತರಗತಿ ರಚನಾ –3 ತರಬೇತಿ ಸಾಹಿತ್ಯ
ಬಸವ ವಚನ ಸಾರ–ಜನಪದ ಪ್ರಕಾಶನ ಬೆಂಗಳೂರು
ಜೇಡರ ದಾಸಿಮಯ್ಯ –ಡಾ॥.ಸಿ.ಕೆ ನಾವಲಿಗೆ
ಕನ್ನಡ ಎಂ.ಎ ಅಧ್ಯಯನ ಪುಸ್ತಕಗಳು–ಕ.ರಾ.ಮು..ವಿ.ವಿ.ಮೈಸೂರು
ವಚನ ದೀಪಿಕೆ– ಅಖಿಲ ಭಾರತ ಶರಣ ಸಾಹಿತ್ಯಪರಿಷತ್ತು ಜಿಲ್ಲಾಘಟಕ ಬಳ್ಳಾರಿ
ಕನ್ನಡ ಗುರು ವೃಂದ ಹೈಕ್,ಟೆಲಿಗ್ರಾಮ್,ಎಸ್.ಟಿ.ಎಫ್ ಹಂಚಿಕೆ ಸಂಪನ್ಮೂಲಗಳು

*****

## ಪದ್ಯಪಾಠ – 01

# ಎಮ್ಮನುಡಿಗೇಳ್

**– ಆದಿಕವಿ ಪಂಪ**

| | |
|---|---|
| <br>ಪಂಪ | **ಕವಿ ಪರಿಚಯ**<br>**ಪಂಪ : ಕನ್ನಡದ ಆದಿಕವಿ ಎನಿಸಿಕೊಂಡ ಪಂಪನು ಕ್ರಿ. ಶ. ಸುಮಾರು 941 ರಲ್ಲಿ ವೆಂಗಿಮಂಡಲದ ವೆಂಗಿಪಳು ಎಂಬ ಅಗ್ರಹಾರದಲ್ಲಿ ಜನಿಸಿದನು. ಚಾಲುಕ್ಯರ ದೊರೆ ಅರಿಕೇಸರಿಯ ಆಸ್ಥಾನ ಕವಿಯಾಗಿದ್ದ ಪಂಪನು 'ವಿಕ್ರಮಾರ್ಜುನ ವಿಜಯ ಮತ್ತು ಆದಿ ಪುರಾಣ' ಎಂಬ ಮಹಾಕಾವ್ಯಗಳನ್ನು ರಚಿಸಿದ್ದಾನೆ. ಕನ್ನಡದ ರತ್ನತ್ರಯರಲ್ಲಿ ಒಬ್ಬನಾಗಿದ್ದ ಈತನಿಗೆ ' ಸರಸ್ವತಿ ಮಣಿಹಾರ ', ' ಸಂಸಾರ ಸಾರೋದಯ ', 'ಕವಿತಾ ಗುಣಾರ್ಣವ 'ಎಂಬ** |

* * * * *

ವೇದವ್ಯಾಸರ ಮಹಾಭಾರತವನ್ನು ಆಧರಿಸಿ ಪಂಪನು ಕನ್ನಡದಲ್ಲಿ **ವಿಕ್ರಮಾರ್ಜುನ ವಿಜಯ** ಎಂಬ ಕೃತಿ ಬರೆದಿದ್ದಾನೆ. ಈ **ವಿಕ್ರಮಾರ್ಜುನ ವಿಜಯ** ಕೃತಿಯಿಂದ **'ಎಮ್ಮನುಡಿಗೇಳ್'** ಪದ್ಯಭಾಗವನ್ನು ಆಯ್ಕೆ ಮಾಡಲಾಗಿದೆ.

* * * * *

### ಪೂರ್ವಕಥೆ

ದಾಯಾದಿ ಮತ್ಸರ ಮತ್ತು ಛಲದಿಂದಾಗಿ ಕೌರವನು ಯುದ್ಧವನ್ನೇ ಬಯಸಿದ ಕಾರಣ ಮಹಾಭಾರತ ಯುದ್ಧ ಅನಿವಾರ್ಯವಾಯ್ತು, ಕೌರವನ ಹನ್ನೊಂದು ಅಕ್ಷೋಹಿಣಿ ಸೈನ್ಯ ಪಾಂಡವರ ಏಳು ಅಕ್ಷೋಹಿಣಿ ಸೈನ್ಯದೊಳಗೆ ನಡೆದ ಹದಿನೆಂಟು ದಿನಗಳ ಯುದ್ಧದಲ್ಲಿ ಮೊದಲ ಹತ್ತುದಿನ ಭೀಷ್ಮನ ಸೇನಾಧಿಪತ್ಯದಲ್ಲಿ, ಅನಂತರದ ಐದು ದಿನ ದ್ರೋಣರ ಸೇನಾಧಿಪತ್ಯದಲ್ಲಿ, ಎರಡು ದಿನ ಕರ್ಣನ ಸೇನಾಧಿಪತ್ಯದಲ್ಲಿ ಯುದ್ಧ ನಡೆದು ಕರ್ಣನ ಅವಸಾನದೊಂದಿಗೆ ಕೌರವನ ಹನ್ನೊಂದು ಅಕ್ಷೋಹಿಣಿ ಸೈನ್ಯದಲ್ಲಿ ಹತ್ತು ಅಕ್ಷೋಹಿಣಿ ಸೈನ್ಯ ಸಹಿತ ಅವನ ತೊಂಬತ್ತೊಂಬತ್ತು ಸಹೋದರರು ಸಾವನ್ನಪ್ಪಿದರು. ಕರ್ಣನ ಸಾವನ್ನು ಕಂಡು ಕಂಗಾಲಾದ ಕೌರವ ತನ್ನ ರಥದಲ್ಲಿ ಮೂರ್ಛೆ ಹೋದುದನ್ನು ಗಮನಿಸಿದ ಅಶ್ವತ್ಥಾಮ, ಕೃಪ, ಕೃತವರ್ಮ, ಶಕುನಿ ಇವರು ಶಿಬಿರಕ್ಕೆ ಕರೆದುಕೊಂಡು ಹೋದರು. ಶೈತ್ಯೋಪಚಾರದಿಂದ ಎಚ್ಚೆತ್ತ ದುರ್ಯೋಧನನು ಕರ್ಣನ ಸಾವಿಗಾಗಿ ಪ್ರಲಾಪಿಸುತ್ತಿರುವಾಗ ತಂದೆ ತಾಯಿಗಳಾದ ಧೃತರಾಷ್ಟ್ರ ಮತ್ತು ಗಾಂಧಾರಿ ತನ್ನೆಡೆಗೆ ಬರುತ್ತಿದ್ದಾರೆಂದು ತಿಳಿದು ಅವರನ್ನು ಹೇಗೆ ಸಂತೈಸಲಿ ಎಂದು ಚಿಂತಿಸುತ್ತಿರುವಾಗ, ಉಳಿದಿರುವ ಒಬ್ಬ ಮಗನನ್ನಾದರೂ ಉಳಿಸಿಕೊಳ್ಳಬೇಕೆಂಬ ಹಂಬಲದಿಂದ ಧೃತರಾಷ್ಟ್ರ, ಗಾಂಧಾರಿ ದುರ್ಯೋಧನನ ಶಿಬಿರಕ್ಕೆ ಬಂದು ಬುದ್ಧಿವಾದ ಹೇಳುವ ಸನ್ನಿವೇಶವೇ ಈ ಪದ್ಯಭಾಗ.

**"ಪುತ್ರಶೋಕನಿರಂತರಂ"** ಎಂಬ ಮಾತಿದೆ. ತಂದೆ–ತಾಯಿ ಮಕ್ಕಳ ಸಂಬಂಧ ಅಂತಃಕರಣ ಮಿಡಿಯುವಂಥದ್ದು. ಯುದ್ಧ ಅನಿವಾರ್ಯವೆನಿಸಿದರೂ ಮಕ್ಕಳನ್ನು ಕಳೆದುಕೊಂಡ ತಂದೆ, ತಾಯಿಯ ದುಃಖ ತೀವ್ರವಾದುದು. ತೊಂಬತ್ತೊಂಬತ್ತು ಮಕ್ಕಳನ್ನು ಕಳೆದುಕೊಂಡ ವೃದ್ಧ ದಂಪತಿಗಳಾದ ಧೃತರಾಷ್ಟ್ರ ಮತ್ತು ಗಾಂಧಾರಿ ರಣರಂಗಕ್ಕೆ ಬಂದು ಪ್ರಾರ್ಥಿಸುವ ದೃಶ್ಯ ಹೃದಯವಿದ್ರಾವಕವಾದುದು. ಉಳಿದಿರುವ
ದುರ್ಯೋಧನನೊಬ್ಬನಾದರೂ ಬದುಕಲಿ ಎಂಬ ಭಾವ ಅವರನ್ನು ಆವರಿಸಿದೆ. ಯುದ್ಧ, ದ್ವೇಷ ಅಸೂಯೆ, ಕೀರ್ತಿಯ ಬೆನ್ನ ಹಿಡಿದು ಹೋದರೆ ಎಂತಹ ಪರಿಣಾಮವನ್ನು ಎದುರಿಸಬೇಕಾಗುತ್ತದೆ, ಎಂಬುದು ಈ ಪದ್ಯದಲ್ಲಿ ಮಾರ್ಮಿಕವಾಗಿ ಚಿತ್ರಿತವಾಗಿದೆ.



ಅಕ್ಷೋಹಿಣಿ ಮಾಹಿತಿ

ಅಕ್ಷೋಹಿಣಿ ಎಂದರೆ ರಥ,ಆನೆ,ಕುದುರೆ,ಕಾಲ್ದಳಗಳಿಂದ ಕೂಡಿದ ಸೈನ್ಯ. 21870 ರಥಗಳು ,21870 ಆನೆಗಳು ,65,610 ಕುದುರೆಗಳು ,1,09,350 ಕಾಲಾಳುಗಳು ಸೇರಿದರೆ ಒಂದು ಅಕ್ಷೋಹಿಣಿ ಸೈನ್ಯವಾಗುತ್ತದೆ. ಮಹಾಭಾರತ ಯುದ್ಧ ನಡೆದಿದ್ದ ಇಂತಹ 18 ಅಕ್ಷೋಹಿಣಿ ಸೈನ್ಯಗಳ ಮಧ್ಯೆ.



**ವಚನ ॥ ಎಂಬೆನ್ನಗಮೆಯ್ದೆ ವಂದ ಪಿತೃದ್ವಂದ್ವ ಚರಣಕ್ಕೆ ವಿನಯವಿನಮಿತೋತ್ತಮಾಂಗ ನಾದನ ನಿರ್ವರುಂಪರಸಿ ತಡವರಿಸಿಯುಂ ತೆಬ್ಬರಿಸಿಯುಮಪ್ಪಿಅಿಕೊಳಪ್ಪಿಕೊಂಡಮೃತವರ್ಷಿ ಕರಪರಿಷೇಕದಿಂದೆ ಪುತ್ರಸ್ಪರ್ಶನಮಾಪ್ಯಾಯನ ಕೋಟಿಯಾಗೆ ಪುಳಕಿತಗಾತ್ರರುಮಾನಂದ ಬಾಷ್ಪವಾರಿ ಧಾರಾಪರಿಕಲಿತ ನೇತ್ರರುಮಾಗಿ ಕಿಱಿದಾನುಂ ಬೇಗಮಿರ್ದಲ್ಲಿ ಕಾರ್ಯವ್ಯಗ್ರ ಪಾಪಿಪಾಶಾಶ್ರಿತರೆಲ್ಲರುಂ ಕೇಳಲೆಂದು ಮಹೀಭುಜನಿಂತೆಂದಂ**

ಎಂಬೆ + ಅನ್ನೆಗಮ್ + ಐಯ್ದಿ ವಂದ ಪಿತೃದ್ವಂದ್ವ ಚರಣಕ್ಕೆ ವಿನಯ ವಿನಮಿತ + ಉತ್ತಮ + ಅಂಗನ್ + ಆದನನ್ ಇರ್ವರುಂ ಪರಸಿ ತಡವರಿಸಿಯುಂ ತೆಬ್ಬರಸಿಯುಂ +ಅಱ್ಕೆ(ಳ್ಕ)ಱಿೊ(ರೊ)ಳ್+ಅಪ್ಪಿಕೊಂಡು ಅಮೃತ ವರ್ಷಿ ಕರಪರಿಷೇಕದಿಂದೆ ಪುತ್ರ ಸ್ಪರ್ಶನಮ್+ಆಪ್ಯಾಯನ ಕೋಟಿ+ಆಗೆ ಪುಳಕಿತ ಗಾತ್ರರುಮ್ ಆನಂದ ಬಾಷ್ಪವಾರಿ ಧಾರಾ ಪರಿಕಲಿತ ನೇತ್ರರುಮ್+ಆಗಿ ಕಿಱಿ(ರಿ)ದು+ ಆನುಮ್+ ಬೇಗಮ್+ ಇರ್ದು+ಅಲ್ಲಿ ಕಾರ್ಯವ್ಯಗ್ರ ಪಾಪಿಪಾಶ+ಆಶ್ರಿತರೆಲ್ಲರುಂ ಕೇಳಲೆಂದು ಮಹೀಭುಜನ್+ಇಂತು+ಎಂದಂ.

ಎಂಬೆನ್ನೆಗಮ್–ಎನ್ನುವಷ್ಟರಲ್ಲಿ, ಐಯ್ದೆ–ಸಮೀಪಕ್ಕೆ, ಪಿತೃ–ತಂದೆ, ದ್ವಂದ್ವ–ಎರಡು, ನಮಿತ–ನಮಿಸಿ ಉತ್ತಮಾಂಗ–ತಲೆ, ಪರಸಿ–ಹರಸಿ, ತೆಬ್ಬರಿಸಿ–ಧೈರ್ಯಹೇಳಿ, ವರ್ಷಿ–ಸುರಿಸುವ, ಪರಿಷೇಕ–ಸವರು ಪರಿಕಲಿತ–ಕೂಡಿದ, ಅಱ್ಕೆರು–ಪ್ರೀತಿ, ವರ್ಷಿ–ಸುರಿಸು, ಪರಿಷೇಕ–ಅಭಿಷೇಕ, ನೇತ್ರ–ಕಣ್ಣು ಮಹಿ–ಭೂಮಿ, ಭುಜ–ಒಡೆಯ(ಮಹೀಭುಜ–ಧೃತರಾಷ್ಟ್ರ).

## ಸಾರಾಂಶ

ದುರ್ಯೋಧನನು ತನ್ನ ಬಳಿಗೆ ಬಂದ ತಂದೆ ತಾಯಿಯರ ಪಾದಗಳಿಗೆ (ಧೃತರಾಷ್ಟ್ರ ಮತ್ತು ಗಾಂಧಾರಿ) ವಿನಯದಿಂದ ನಮಿಸಿ ತಲೆಬಾಗುತ್ತಾನೆ. ಆಗ ಅವರಿಬ್ಬರು ಅವನನ್ನು ಹರಸಿ, ಮೈಯನ್ನು ಮುಟ್ಟಿ ನೋಡಿ, ಸಮಾಧಾನಪಡಿಸಿ, ಧೈರ್ಯಹೇಳಿ ಪ್ರೀತಿಯಿಂದ ಅಪ್ಪಿಕೊಂಡು ಅಮೃತ ಸುರಿಸುವ ಕೈಗಳಿಂದ ಮೈಸವರಿ, ಪುತ್ರಸ್ಪರ್ಶದ ಸಂತೋಷದ ತುತ್ತತುದಿಯನ್ನು ತಲುಪಿ, ಪುಳಕಿತರಾಗಿ ಕಣ್ಣೀರಧಾರೆಯಿಂದ ಕೂಡಿದ ಕಣ್ಣುಗಳುಳ್ಳವರಾಗಿ ಸ್ವಲ್ಪ ಸಮಯ ಇದ್ದು, ಮುಂದಿನ ಕಾರ್ಯದಲ್ಲಿ ಆಸಕ್ತನಾದ ಪಾಪಿ ದುರ್ಯೋಧನನ ಪಾಶಕ್ಕೆ ಆಶ್ರಿತರಾದವರೆಲ್ಲರೂ ಕೇಳಲಿ ಎಂದು ಧೃತರಾಷ್ಟ್ರನು ಹೀಗೆ ಹೇಳಿದನು.

**ಮ ॥ಎನಗಂ ಪಾಂಡುಗಮಿಲ್ಲ ಭೇದಮಿಳೆಯಂ ಪಚ್ಚಾಳ್ವಮಾ ಪಾಂಡುನಂ**
**ದನರುಂ ಸೈದರೆ ನಿನ್ನೊಳೀ ಕಲಹಮುಂ ನಿನ್ನಿಂದಮಾಯ್ತೆಂದೊಡಿಂ ।**
**ಮುನಿವೈ ಗಂಗೆಯ ಪೆರ್ಮಗಂಗೆ ಘಟಸಂಭೂತಂಗೆ ಕರ್ಣಂಗಸಾ**
**ಧ್ಯನೊಳಾ ಗಾಂಡಿವಿಯೊಳ್ ಕಱುತ್ತಿಱಿವರಾರಿಂ ಮಾಡುವಂ ಸಂಧಿಯಂ ॥**



ಎನಗಂ ಪಾಂಡುಗಮ್+ಇಲ್ಲ ಭೇದಮ್+ಇಳೆಯಂ ಪಚ್ಚ+ಆಳ್ವಮ್+ಆ ಪಾಂಡು ನಂದನರುಂ ಸೈದರೆ ನಿನ್ನೊಳ್+ಈ ಕಲಹಮುಂ ನಿನ್ನಿಂದಮ್ +ಆಯ್ತು +ಎಂದೊಡೆ +ಇಂ ಮುನಿವೈ, ಗಂಗೆಯ ಪೆರ್ಮಗಂಗೆ ಘಟಸಂಭೂತಂಗೆ ಕರ್ಣಂಗೆ+ ಅಸಾಧ್ಯನೊಳ್ +ಆ ಗಾಂಡಿವಿಯೊಳ್ ಕಱು(ರು)ತ್ತು+ಇಱಿ(ರಿ)ವರ್ ಆರ್+ಇಂ+ ಮಾಡುವಂ+ ಸಂಧಿಯಂ

ಭೇದ–ವ್ಯತ್ಯಾಸ, ಇಳೆ–ಭೂಮಿ, ಪಚ್ಚ–ಹಂಚಿ, ಸೈದರೆ–ಹೊಂದಿಕೊಂಡರೆ ಕಲಹ–ಯುದ್ಧ, ಜಗಳ, ಮುನಿ–ಕೋಪಿಸು, ಪೆರ್ಮ–ಹಿರಿಯ, ಕಱುತ್ತು–ಕೋಪಗೊಂಡು,ಇಱಿ(ರಿ)ವರ್–ಯುದ್ಧಮಾಡುವವರು.

**ಪಾಂಡು** : ಪಾಂಡವರ ತಂದೆ, ಧೃತರಾಷ್ಟ್ರನ ತಮ್ಮ.

**ಘಟಸಂಭೂತ** : ಘಟ–ಕುಂಭ, ಸಂಭೂತ–ಜನಿಸಿದವನು, ಕುಂಭದಲ್ಲಿ ಜನಿಸಿದವನು ದ್ರೋಣ.

**ಗಾಂಡಿವಿ** : ಗಾಂಡಿವ (ಗಾಂಡೀವ) ಎಂಬ ಬಿಲ್ಲನ್ನು ಹೊಂದಿರುವವನು – ಗಾಂಡೀವಿ – ಅರ್ಜುನ

## ಸಾರಾಂಶ

ಧೃತರಾಷ್ಟ್ರನು ದುರ್ಯೋಧನನನ್ನು ಕುರಿತು ಎನಗೂ ಪಾಂಡುವಿಗೂ ಭೇದವಿಲ್ಲ; ರಾಜ್ಯವನ್ನು ಹಂಚಿಕೊಂಡು ಆಳೋಣ. ಆ ಪಾಂಡುವಿನ ಮಕ್ಕಳೂ ನಿನ್ನಲ್ಲಿ ಸರಿಯಾಗಿ ಹೊಂದಿಕೊಳ್ಳುತ್ತಾರೆ ; ಈ ಯುದ್ಧವು ನಿನ್ನಿಂದ ಆಯಿತು ಎಂದರೆ ಇನ್ನು ಕೋಪಗೊಳ್ಳುತ್ತೀಯೇ; ಭೀಷ್ಮನಿಗೆ, ದ್ರೋಣನಿಗೆ, ಕರ್ಣನಿಗೆ ಗೆಲ್ಲಲು ಅಸಾಧ್ಯನಾದ ಆ ಅರ್ಜುನನಲ್ಲಿ ಕೋಪಿಸಿ ಯುದ್ಧ ಮಾಡುವವರು ಇನ್ನು ಯಾರು? ಸಂಧಿಯನ್ನು ಮಾಡೋಣ' ಎಂದು ಹೇಳುತ್ತಾನೆ.

**ಹರಿಣಿ॥ ಪಗೆಗೆ ಕಣಿಯೊಂದುಂಟೇ ನಣ್ಪಿಂಗಮಾಗರಮುಂಟೆ ನೀಂ**
**ಬಗೆಯ ಪಗೆಯುಂ ನಣ್ಪುಂ ಕಯ್ಕೊಂಡ ಕಜ್ಜದಿನಲ್ತೆ ಪು ।**
**ಟ್ಟುಗುಮರಸುಗಳ್ಗೆಂದೀ ಸಂದರ್ಥಶಾಸ್ತ್ರದೊಳೇಕೆ ಪೇೞ್**
**ಮಗನೆ ನೆಗೞ್ದಪೈ ಕಾರ್ಯಂ ಮಿತ್ರಾದಿ ಕಾರಕಮೆಂಬುದಂ ॥**

| |
|---|
| ಪಗೆಗೆಕಣಿ ಒಂದು+ಉಂಟೇ, ನಣ್ಪಿಂಗಮ್+ಆಗರಮ್+ಉಂಟೆ, ನೀಂ ಬಗೆಯ, ಪಗೆಯುಂ ನಣ್ಪುಂ ಕಯ್ಕೊಂಡ ಕಜ್ಜದಿನ್ +ಅಲ್ತೆ ಪುಟ್ಟುಗುಮ್+ಅರಸುಗಳ್ಗೆ+ಎಂದು+ಈ ಸಂದ+ ಅರ್ಥಶಾಸ್ತ್ರದೊಳ್+ಏಕೆ ಪೇೞ್ ಮಗನೆ ನೆಗೞ್ದ್ ೖಕಾರ್ಯಂ ಮಿತ್ರಾದಿ ಕಾರಕಮ್+ಎಂಬುದಂ. |

ಪಗೆ-ಶತ್ರು, ಕಣಿ-ಗಣಿ,ಆಶ್ರಯ ; ನಣ್ಪು-ನಂಟು, ಬಾಂಧವ್ಯ; ಆಗರ-ಮನೆ,ಸ್ಥಳ; ಬಗೆ-ಆಲೋಚಿಸು ಕಜ್ಜ-ಕಾರ್ಯ, ಕಾರಕ-ಕಾರಣ

**ಅರ್ಥಶಾಸ್ತ್ರ**-ಸಂಪತ್ತು ನಿರ್ವಹಣೆಯನ್ನು ತಿಳಿಸುವ ಶಾಸ್ತ್ರ.(ಉದಾ ಕೌಟಿಲ್ಯನ ಅರ್ಥಶಾಸ್ತ್ರ.)
**ಹರಿಣಿ** : ಇದು ಅಕ್ಷರಗಣದಲ್ಲಿ ಬರುವ ವೃತ್ತ, ಖ್ಯಾತ ಕರ್ಣಾಟಕದಲ್ಲಿ ಇದು ಸೇರಿಲ್ಲ.

## ಸಾರಾಂಶ

ಧೃತರಾಷ್ಟ್ರನು ದುರ್ಯೋಧನನನ್ನು ಕುರಿತು ಮಗನೇ, ದ್ವೇಷಕ್ಕೆ ಒಂದು ಮನೆ; ನಂಟುತನಕ್ಕೆ ಒಂದು ಮನೆ ಎಂದು ಇದೆಯೇ? ಆಲೋಚನೆ ಮಾಡು. ರಾಜರುಗಳಿಗೆ ಹಗೆತನವೂ ನಂಟುತನವೂ(ಬಾಂಧವ್ಯವೂ) ಮಾಡಿದ ಕಾರ್ಯದಿಂದ ಉಂಟಾಗುತ್ತವೆ ಎಂದು ಪ್ರಸಿದ್ಧವಾದ ದಂಡನೀತಿಶಾಸ್ತ್ರದಲ್ಲಿ ಹೇಳಿಲ್ಲವೇ? ಮಿತ್ರರನ್ನೂ ಶತ್ರುಗಳನ್ನೂ ಉಂಟುಮಾಡುವ ಕಾರ್ಯವನ್ನು ಏಕೆ ಮಾಡುತ್ತೀಯೇ?' ಎಂದು ಹೇಳುತ್ತಾನೆ.

**ಕಂ ॥ ನೀನುಳ್ಳೊಡೆಲ್ಲರೊಳರೆಮ**
**ಗೇನುಮಟಿಲ್ ಮನದೊಳಲ್ಲದೆಂತೆನೆ ಮಗನೇ ।**
**ಭಾನುವೆ ಸಾಲದೆ ಪಗಲೆನಿ**
**ತಾನುಂ ದೀವಿಗೆಗಳುರಿದೊಡೇಂ ನಂದಿದೊಡೇಂ ॥**





ನೀನ್+ಉಳ್ಳೊಡೆ+ಎಲ್ಲರ್+ಒಳರ್, ಎಮಗೆ+ಏನುಮ್+ಅೞ(ಳ)ಲ್+ಮನದೊಳ್+ಇಲ್ಲ, ಅದು+ಎಂತು+ಎನೆ ಮಗನೇ , ಭಾನುವೆ ಸಾಲದೆ ಪಗಲ್+ಎನಿತು+ಆನುಂ ದೀವಿಗೆಗಳ್+ಉರಿದೊಡೆ+ಎಂ ನಂದಿದೊಡೆ+ಎಂ.

ಒಳರ್–ಇರುವವರು, ಅೞಲ್–ದುಃಖ ಭಾನು–ಸೂರ್ಯ, ಪಗಲ್–ಹಗಲು ದೀವಿಗೆ–ದೀಪ

## ಸಾರಾಂಶ

ಧೃತರಾಷ್ಟ್ರನು ದುರ್ಯೋಧನನನ್ನು ಕುರಿತು ಮಗನೇ, ನಮಗೆ ನೀನು ಇದ್ದರೆ ಎಲ್ಲರೂ ಇದ್ದಂತೆ. ಮನದಲ್ಲಿ ಏನು ದುಃಖವಿಲ್ಲ. ಅದು ಹೇಗೆಂದರೆ ಹಗಲಿನಲ್ಲಿ ಸೂರ್ಯನೊಬ್ಬನು ಸಾಕಲ್ಲವೇ, ಎಷ್ಟು ದೀಪಗಳು ಉರಿದರೇನು? ಆರಿ ಹೋದರೇನು? ಎಂದು ಹೇಳುತ್ತಾನೆ. (ನೀನು ಕುರುಕುಲಕ್ಕೆ ಸೂರ್ಯನಿದ್ದಂತೆ ಉಳಿದವರು ಬದುಕಿದ್ದರೇನು ಸತ್ತರೇನು )

**ವ ॥ ಅದಲ್ಲದೆಯುಂ ಪಾಂಡವರಪ್ಪೊಡೆನಗೆ ಪಾಂಡುರಾಜಂಗೆ ಬೆಸಕಯ್ದುದೆನೆ ಬೆಸಕಯ್ವರೆಂದುದಂ**
**ಮೀಱುವರಲ್ಲರವರ ನಾನೆಂತುಮೊಡಂಬಡಿಸಿ ನೀನೆಂದುದನೆನಿಸುವೆನಿದರ್ಕೆ ಮಾರ್ಕೊಳ್ಳದೊಡಂಬಡು**
**ನಿನ್ನಂ ಕಯ್ಯನೊಡ್ಡಿ ಬೇಡಿದಪ್ಪೆನೆಂದ ಧೃತರಾಷ್ಟ್ರನ ನುಡಿಗನುಬಲಮಾಗಿ ಗಾಂಧಾರಿಯಿಂತೆಂದಳ್**

ಅದು ಅಲ್ಲದೆಯುಂ ಪಾಂಡವರ್+ಅಪ್ಪೊಡೆ+ಎನಗೆ ಪಾಂಡುರಾಜಂಗೆ ಬೆಸಕಯ್ದುದನೆ ಬೆಸಕಯ್ವರ್, ಎಂದುದಂ ಮೀಱು(ರು)ವರ್+ಅಲ್ಲರ್ ಅವರನ್+ಆನ್+ಎಂತುಮ್+ಒಡಂಬಡಿಸಿ ನೀನ್+ ಎಂದುದನೆ+ ಎನಿಸುವೆನ್+ಇದರ್ಕೆ ಮಾರ್ಕೊಳ್ಳದೆ+ಒಡಂಬಡು, ನಿನ್ನಂ ಕೈಯನ್+ ಒಡ್ಡಿ ಬೇಡಿದಪ್ಪೆನ್+ಎಂದ ಧೃತರಾಷ್ಟ್ರನ ನುಡಿಗೆ ಅನುಬಲಮ್+ಆಗಿ ಗಾಂಧಾರಿ+ಇಂತು+ಎಂದಳ್.

ಅಪ್ಪೊಡೆ– ಆದರೂ ಬೆಸಕ್ಕೈ–ಹೇಳು, ಮಾರ್ಕೊಳ್ಳು–ಪ್ರತಿಯಾಡು, ಅನುಬಲ–ಬೆಂಬಲ(ಸಹಾಯಕ)

## ಸಾರಾಂಶ

ಧೃತರಾಷ್ಟ್ರನು ದುರ್ಯೋಧನನನ್ನು ಕುರಿತು ಮಗನೇ, ಅದಲ್ಲದೆಯೂ ಪಾಂಡವರಾದರೂ ಪಾಂಡುರಾಜನಿಗೆ ಮಾಡಿದುದನ್ನೇ ನನಗೆ ಮಾಡುವರು. (ಹೇಳಿದಂತೆ ಕೇಳುವರು ,ಪಾಂಡುರಾಜನ ಮಾತನ್ನು ಕೇಳಿದಂತೆ ನನ್ನ ಮಾತನ್ನು ಕೇಳುವರು). ಹೇಳಿದ ಮಾತನ್ನು ಮೀರುವವರಲ್ಲ. ಅವರನ್ನು ನಾನು ಹೇಗಾದರೂ ಒಪ್ಪಿಸಿ, ನೀನು ಹೇಳಿದುದ್ದನ್ನು ಹೇಳಿಸುವೆನು. ಅದಕ್ಕೆ ಪ್ರತಿಯಾಡದೆ (ಪ್ರತಿಭಟಿಸದೆ) ಒಪ್ಪಿಕೋ, ನಿನ್ನನ್ನು ಕೈಯೊಡ್ಡಿ ಬೇಡುವೆನು' ಎಂದು ಹೇಳುತ್ತಾನೆ. ಧೃತರಾಷ್ಟ್ರನ ಆ ಮಾತಿಗೆ ಬೆಂಬಲವಾಗಿ ಗಾಂಧಾರಿ ಹೀಗೆ ಹೇಳಿದಳು.

**ಚಂ ॥ ಕುರುಕುಳನಂದನಂ ಪವನನಂದನನೆಂಬ ಮದಾಂಧಗಂಧಸಿಂ**
**ಧುರಮೆ ಕಱುತ್ತು ಪಾಯೆ ಪಡಲಟ್ಟವೊಲಾದುದು ಪುಣ್ಯದೊಂದು ಪೆ ।**
**ರ್ಮರನುಱಿವಂತೆ ನೀನುಱಿದೆಯಿನ್ನಿಱಿವನ್ನರುಮಿಲ್ಲ ಮುತ್ತರುಂ**
**ಕುರುಡರುಮೆನ್ನದೆಮ್ಮ ನುಡಿಗೇಳ್ ಮಗನೇ ಬಗೆ ತಂದೆಗಿಂಬುಕೆಯ್ ॥**



ಕುರುಕುಳನಂದನಂ ಪವನನಂದನನ್+ಎಂಬ ಮದಾಂಧಗಂಧ ಸಿಂಧುರಮೆ ಕಱು(ರು)ತ್ತು ಪಾಯೆ ಪಡಲಿಟ್ಟವೊಲ್+ಆದುದು ಪುಣ್ಯದೊಂದು ಪೆರ್ಮರನ್+ಉೞಿ(ಳಿ)ವಂತೆ ನೀನ್+ಉೞಿ(ಳಿ) ದೆಯ್ ಇನ್+ಇಱಿ(ರಿ)ವ+ಅನ್ನರುಮ್+ಇಲ್ಲ, ಮುತ್ತರುಂ ಕುರುಡರುಮ್+ಎನ್ನದೆ+ಎಮ್ಮ ನುಡಿ+ಕೇಳ್ ಮಗನೇ ಬಗೆ ತಂದೆಗೆ+ಇಂಬುಕೆಯ್

ನಂದನ–ನಂದನವನ,ತೋಟ ಪಾಯ್–ನುಗ್ಗು, ಇಱಿ(ರಿ)ವನ್ನರ್–ಯುದ್ಧ ಮಾಡುವವರು, ಇಂಬು–ಬೆಂಬಲ, ಮುತ್ತರ್–ಮುದುಕರು.

**ಪವನನಂದನ** :ಪವನ –ವಾಯು, ನಂದನ – ಮಗ, ವಾಯುವಿನ ವರಬಲದಿಂದ ಕುಂತಿಯಲ್ಲಿ ಜನಿಸಿದವನು – ಭೀಮಸೇನ.

**ಮದಾಂಧಗಂಧಸಿಂಧುರ** : ಮದ+ಅಂಧಗಂಧಸಿಂಧುರ, ಮದ – ಸೊಕ್ಕು ; ಅಂಧ – ಕುರುಡ ; ಗಂಧ ಸುವಾಸನೆ; ಸಿಂಧುರ–ಆನೆ = ಮದದಿಂದ ಕುರುಡಾದ ಆನೆ(ಭೀಮ)

## ಸಾರಾಂಶ


ಗಾಂಧಾರಿಯು ದುರ್ಯೋಧನನನ್ನು ಕುರಿತು 'ಕುರುವಂಶವೆಂಬ ನಂದನವನ(ತೋಟ)ಕ್ಕೆ ಭೀಮನು ನುಗ್ಗಲು ಮದದಿಂದ ಕುರುಡಾಗಿ ಸೊಕ್ಕೇರಿದ ಆನೆಯೇ ಕೋಪಿಸಿ ನುಗ್ಗಿ ಧ್ವಂಸ ಮಾಡಿದಂತೆ ಆಯಿತು. ಪುಣ್ಯದಿಂದ ಒಂದು ದೊಡ್ಡ ಮರವು ಉಳಿಯುವಂತೆ ನೀನು ಉಳಿದಿದ್ದೀಯಾ ಇನ್ನು ಯುದ್ಧ ಮಾಡುವಂಥವರೂ ಯಾರು ಇಲ್ಲ; ಮಗನೇ, ನಮ್ಮನ್ನು ಮುದುಕರೂ ಕುರುಡರೂ ಎಂದು ಹೇಳದೆ ನಮ್ಮ ಮಾತನ್ನು ಕೇಳು, ಆಲೋಚಿಸು, ತಂದೆಯ ಮಾತಿಗೆ ಒಪ್ಪಿಗೆ ಕೊಡು' ಎಂದು ಹೇಳುತ್ತಾಳೆ.



## ಪದ್ಯಪಾಠ – 02

# ಹಕ್ಕಿ ಹಾರುತಿದೆ ನೋಡಿದಿರಾ !

**–ದ.ರಾ.ಬೇಂದ್ರೆ**



### ಕವಿ ಪರಿಚಯ

**ಅಂಬಿಕಾತನಯದತ್ತ** ಎಂಬ ಕಾವ್ಯನಾಮದಿಂದ ಪ್ರಸಿದ್ಧರಾಗಿರುವ ದತ್ತಾತ್ರೇಯ ರಾಮಚಂದ್ರ ಬೇಂದ್ರೆಯವರು ಕ್ರಿ.ಶ 1896ರಲ್ಲಿ ಧಾರವಾಡದಲ್ಲಿ ಜನಿಸಿದರು. ನವೋದಯ ಕನ್ನಡ ಸಾಹಿತ್ಯದ ಪ್ರಮುಖ ಕವಿಗಳಲ್ಲಿಒಬ್ಬರಾದ ದ.ರಾ. ಬೇಂದ್ರೆ ಅವರು **ಗರಿ, ಕೃಷ್ಣಕುಮಾರಿ, ಉಯ್ಯಾಲೆ, ಸಖೀಗೀತ, ನಾದಲೀಲೆ, ಮೇಘದೂತ, ಗಂಗಾವತರಣ, ಸೂರ್ಯಪಾನ,ನಗೆಯ ಹೊಗೆ, ಸಾಹಿತ್ಯದವಿರಾಟ್ ಸ್ವರೂಪ** ಮೊದಲಾದ ಕೃತಿಗಳನ್ನು ರಚಿಸಿದ್ದಾರೆ. ಇವರ **ಅರಳು–ಮರಳು** ಕವನ ಸಂಕಲನಕ್ಕೆ **ಕೇಂದ್ರ ಸಾಹಿತ್ಯ ಅಕಾಡೆಮೆ ಪ್ರಶಸ್ತಿ, ನಾಕುತಂತಿ** ಕವನ ಸಂಕಲನಕ್ಕೆ **ಜ್ಞಾನಪೀಠಪ್ರಶಸ್ತಿ** ಲಭಿಸಿದೆ.

ಕಾಲ ನಿಂತ ನೀರಲ್ಲ ಅದು ಸದಾ ಹರಿಯುತ್ತಿರುವ ನದಿ ಇದ್ದಂತೆ. ಚಲನಶೀಲತೆ ಜೀವಂತಿಕೆಯ ಗುಣ. ನಿಸರ್ಗದ ಹೊಂದಾಣಿಕೆಯಂತೆ ಕಾಲ ಉರುಳುತ್ತದೆ. ಅದಕ್ಕೆ ತಡೆ ಎಂಬುದಿಲ್ಲ. ಎಂತಹ ಪ್ರಭಾವಶಾಲಿಯಾದರೂ ನಿಸರ್ಗದತ್ತವಾದ ಕಾಲಚಕ್ರದ ಎದುರಿನಲ್ಲಿ ತಲೆಬಾಗಲೇಬೇಕು. ಅದಕ್ಕೆ ಹೊಂದಿಕೊಳ್ಳಬೇಕು. ಆಯಾ ಕಾಲದಲ್ಲಿ ನಡೆದ ಪ್ರತಿಯೊಂದು ಘಟನೆಯೂ ಕಾಲ ಉರುಳಿದಂತೆ ಇತಿಹಾಸವಾಗುತ್ತ ಹೋಗುತ್ತದೆ. ಕವಿ ಬೇಂದ್ರೆ ಅವರು ಕಾಲದ ಗತಿಯನ್ನು ಹಾರುವ ಹಕ್ಕಿಯೊಂದಿಗೆ ಸಮೀಕರಿಸಿ ನೋಡುವ ಪ್ರಯತ್ನ ಮಾಡಿದ್ದಾರೆ. ಹಕ್ಕಿಯ ಹಾರುವಿಕೆ ಪ್ರಕೃತಿಯ ಸಹಜಕ್ರಿಯೆಯೊಂದಿಗೆ ಯುಗಗಳೇ ಉರುಳಿ ಹೊಸತನಕ್ಕೆ ತೆರೆದುಕೊಳ್ಳುವ ಸಂಕೇತವೂ ಆಗಿದೆ.

ದ.ರಾ.ಬೇಂದ್ರೆ ವಿರಚಿತ **'ಗರಿ'** ಕವನಸಂಕಲನದಿಂದ **ಹಕ್ಕಿ ಹಾರುತಿದೆ ನೋಡಿದಿರಾ !** ಕವಿತೆಯನ್ನು ಆಯ್ಕೆ ಮಾಡಲಾಗಿದೆ. ಈ ಕವಿತೆಯಲ್ಲಿ ಕಾಲದ ವೇಗ, ಚಲನಾಶೀಲತೆ, ವಿಸ್ತಾರ , ಕಾಲದ ಗುರುತು, ವಿಶಾಲತೆ ಮತ್ತು ವ್ಯಾಪ್ತಿ, ಸಾರ್ವಭೌಮತ್ವ, ಪರಿವರ್ತನಾ ನಿಯಮ ಹಾಗೂ ಹಾರೈಕೆ ಮುಂತಾದ ಗುಣಗಳನ್ನು ವಿವರಿಸಲಾಗಿದೆ.

**1**

**ಇರುಳಳಿರುಳಳಿದು ದಿನ ದಿನ ಬೆಳಗೆ**
**ಸುತ್ತಮುತ್ತಲೂ ಮೇಲಕೆ ಕೆಳಗೆ**
**ಗಾವುದ ಗಾವುದ ಗಾವುದ ಮುಂದೆ**
**ಎವೆತೆರೆದಿಕ್ಕುವ ಹೊತ್ತಿನ ಒಳಗೆ**
**ಹಕ್ಕಿ ಹಾರುತಿದೆ ನೋಡಿದಿರಾ !**




**ಇರುಳು–ರಾತ್ರಿ ; ಅಳಿದು–ಕಳೆದು ಗಾವುದ–ದೂರವನ್ನು ಅಳೆಯುವ ಒಂದು ಪ್ರಮಾಣ, ನಾಲ್ಕು ಹರದಾರಿ, 12 ಮೈಲುಗಳ ಅಂತರ ; ಎವೆ–ಕಣ್ಣರೆಪ್ಪೆ**

## ಸಾರಾಂಶ

ಬೇಂದ್ರೆಯವರು ಕಾಲವನ್ನು ಹಾರುವ ಹಕ್ಕಿಗೆ ಹೋಲಿಸಿದ್ದಾರೆ. ಈ ಪದ್ಯದಲ್ಲಿ ಕಾಲದ ವೇಗ–ವಿಸ್ತಾರವನ್ನು ಹೇಳಿದ್ದಾರೆ. ಕಾಲ, ರಾತ್ರಿ ಕಳೆದು ದಿನ ಬೆಳಕಾಗಿ ಪುನಃ ರಾತ್ರಿ – ಬೆಳಗು ಹೀಗೆ ಪುನರಾವರ್ತನೆಯಾಗಿ ಚಲನಾ ಗುಣ ಹೊಂದಿದೆ. ಅದು ಮೇಲೆ, ಕೆಳಗೆ ಸುತ್ತಮುತ್ತ ಎತ್ತೆತ್ತಲೂ ತನ್ನ ಕಬಂಧ ಬಾಹುವನ್ನು ಹರಡಿಕೊಂಡು ವಿಶ್ವವ್ಯಾಪಕವಾಗಿದೆ. ಕಾಲ ಕಣ್ಣು ತೆರೆದು ರೆಪ್ಪೆ ಮುಚ್ಚುವುದರೊಳಗೆ ಗಾವುದ ಗಾವುದ ಗಾವುದ ರೀತಿಯಲ್ಲಿ (12 ಮೈಲು) ವೇಗವಾಗಿ ಹಾರಿಹೋಗುತ್ತಿದೆ. ಇಂತಹ ಹಕ್ಕಿ ಹಾರುವುದನ್ನು (ಕಾಲ ಕಳೆದು) ಹೋಗುವುದನ್ನು ನೀವು ನೋಡಿದಿರಾ! ಎಂದು ಕಾಲದ ಚಲನಾಶೀಲ, ವಿಸ್ತಾರ , ವೇಗ ಗುಣಗಳನ್ನು ತಿಳಿಸಿದ್ದಾರೆ.

2

**ಕರಿನರೆ ಬಣ್ಣದ ಪುಚ್ಚಗಳುಂಟು**
**ಬಿಳಿಹೊಳೆ ಬಣ್ಣದ ಗರಿ ಗರಿಯುಂಟು**
**ಕೆನ್ನನ ಹೊನ್ನನ ಬಣ್ಣಬಣ್ಣಗಳ**
**ರೆಕ್ಕೆಗಳೆರಡು ಪಕ್ಕದಲ್ಲುಂಟು**
**ಹಕ್ಕಿಹಾರುತಿದೆ ನೋಡಿದಿರಾ !**



**ನರೆ–ಬಿಳಬಣ್ಣ ; ಕೆನ್ನ–ಕೆಂಪು ; ಹೊನ್ನ–ಹಳದಿ;**

## ಸಾರಾಂಶ

ಬೇಂದ್ರೆಯವರು ಈ ಪದ್ಯದಲ್ಲಿ ಕಾಲದ ಗುರುತುಗಳನ್ನು ತಿಳಿಸಿದ್ದಾರೆ. ಹಕ್ಕಿಯ ಹಿಂದೆಯಿರುವ ಪುಚ್ಚ ಅಗೋಚರ ಅದು ಕಳೆದುಹೋದ ಭೂತಕಾಲ ಕರಿನರೆ ಬಣ್ಣಕ್ಕೆ ಹೋಲಿಸಿದ್ದಾರೆ. ನೇರವಾಗಿ ಗೋಚರಿಸುವ ಬಿಳಿಹೊಳೆ ಬಣ್ಣದ ಗರಿಗಳು ವರ್ತಮಾನದ ಗುರುತುಗಳು. ಹಾಗೆಯೇ ಕೆಂಪಾಗಿ – ಹೊನ್ನಿನ ಬಣ್ಣಗಳ ರಕ್ಕೆಗಳು ಭವಿಷ್ಯತ್ ಕಾಲದ ಗುರುತುಗಳು. ಹೀಗೆ ಕಾಲವೆಂಬ ಹಕ್ಕಿ ಭೂತ, ವರ್ತಮಾನ, ಭವಿಷ್ಯತ್ ಕಾಲಗಳೆಂಬ ಗುರುತುಗಳನ್ನು ಮೂಡಿಸುತ್ತಾ ಹಾರಿ ಹೋಗುತ್ತಿದೆ ನೋಡಿದಿರಾ ಎಂದು ಅರ್ಥೈಸುತ್ತಾರೆ.



**೩**

**ನೀಲಮೇಘ ಮಂಡಲ ಸಮಬಣ್ಣ**
**ಮುಗಿಲಗೆ ರೆಕ್ಕೆಗಳೊಡೆದವು ಅಣ್ಣ**
**ಚಿಕ್ಕೆಯ ಮಾಲೆಯ ಸೆಕ್ಕಿಸಿಕೊಂಡು**
**ಸೂರ್ಯಚಂದ್ರರನು ಮಾಡಿದೆ ಕಣ್ಣಾ**
**ಹಕ್ಕಿ ಹಾರುತಿದೆ ನೋಡಿದಿರಾ !**



## ಸಾರಾಂಶ

ಬೇಂದ್ರೆಯವರು ಈ ಪದ್ಯದಲ್ಲಿ ಕಾಲದ ವಿಶಾಲತೆ ಮತ್ತು ವ್ಯಾಪ್ತಿಯನ್ನು ವಿವರಿಸಿದ್ದಾರೆ ಹಕ್ಕಿಯು ಆಕಾಶ, ಮೋಡ, ಭೂಮಂಡಲಗಳ ಎಲ್ಲಾ ಬಣ್ಣಗಳನ್ನು ಸಮನಾಗಿ ಆವರಿಸಿಕೊಂಡಿದೆ ಅಂದರೆ ಇವುಗಳಲ್ಲಿ ಬೇಧ ವೆಣಿಸದೆ ಸಮತೆಯನ್ನು ಕಾಣುತಿದೆ. ಹಕ್ಕಿಯ ರಕ್ಕೆಯು ಮೂಡಿದಾಗ ಹೇಗೆ ಹಾರಿಹೋಗುತ್ತದೆಯೋ ಹಾಗೆ ಕಾಲವೆಂಬ ಹಕ್ಕಿ ಮುಗಿಲನ್ನು ರೆಕ್ಕೆ ಮೂಡಿಕೊಂಡು ಅನಂತವಾಗಿ ಹಾರಿಹೋಗುತ್ತಿದೆ ಹೇಗೆಂದರೆ ಚಿಕ್ಕೆಗಳ (ನಕ್ಷತ್ರ) ಮಾಲೆಯನ್ನು ಕೊರಳಿಗೆ ಸಿಕ್ಕಿಸಿಕೊಂಡು ಸೂರ್ಯಚಂದ್ರರನ್ನು ಕಣ್ಣುಗಳನ್ನಾಗಿ ಮಾಡಿಕೊಂಡು ಅನಂತದೆಡೆಗೆ ಹಾರಿಹೋಗಿದೆ ನೋಡಿದಿರಾ ಎಂದು ಹೇಳಿದ್ದಾರೆ.

**4**

**ರಾಜ್ಯದ ಸಾಮ್ರಾಜ್ಯದ ತೆನೆ ಒಕ್ಕಿ**
**ಮಂಡಲ – ಗಿಂಡಲಗಳ ಗಡಮುಕ್ಕಿ**
**ತೇಲಿಸಿ ಮುಳುಗಿಸಿ ಖಂಡ ಖಂಡಗಳ**
**ಸಾರ್ವಭೌಮರ ನೆತ್ತಿಯ ಕುಕ್ಕಿ**
**ಹಕ್ಕಿ ಹಾರುತಿದೆ ನೋಡಿದಿರಾ !**

ಒಕ್ಕಿ–ತೆನೆಯಿಂದ ಕಸಕಡ್ಡಿ ಬೇರ್ಪಡಿಸಿ ; ಗಡ–ಸಣ್ಣ ಕೋಟೆ ; ಮುಕ್ಕಿ–ಗಬಗಬನೆ ತಿಂದು

## ಸಾರಾಂಶ

ಬೇಂದ್ರೆಯವರು ಈ ಪದ್ಯದಲ್ಲಿ ಕಾಲದ ಸಾರ್ವಭೌಮತ್ವ ವನ್ನು ವಿವರಿಸಿದ್ದಾರೆ. ರಾಜ್ಯ, ಸಾಮ್ರಾಜ್ಯಗಳನ್ನು ವೈಭವದಿಂದ ಮೆರೆಯುವಂತೆ ಮಾಡಿದ್ದು ಇದೇ ಕಾಲ. ಹಾಗೆಯೇ ಅವುಗಳ ನಡುವೆ ತೆನೆಯಲ್ಲಿನ ಕಾಳುಗಳನ್ನು ಬೇರ್ಪಡಿಸುವಂತೆ ಬೇರೆಬೇರೆ ಮಾಡಿದ್ದು ಇದೆ ಕಾಲ. ಹಾಗಾಗಿ ಕಾಲ ಸಾರ್ವಭೌಮತ್ವವನ್ನು ಹೊಂದಿದೆ. ರಾಜ–ಮಹಾರಾಜರ ಸಣ್ಣದೊಡ್ಡ, ಕೋಟೆ–ಕೊತ್ತಲಗಳನ್ನು ಗಬಕ್ಕನೆ ನಾಶಮಾಡಿದ್ದು ಕಾಲವೇ. ವಿಶ್ವದ ಎಲ್ಲಾ ಭಾಗಗಳನ್ನು ಒಂದು ಸಲ ವೈಭವದಿಂದ ಮೆರೆಯುವಂತೆ ಮಾಡಿದ್ದು ಮತ್ತೊಂದು ಸಲ ಮಳುಗುವಂತೆ ಮಾಡಿದೆ. ಹಾಗೆಯೇ ಸಾರ್ವಭೌಮರೆಂದು ಮೆರೆದವರ ನೆತ್ತಿಯ ಮೇಲೆ ಕುಕ್ಕಿ ಕೆಳಗೆ ಬೀಳಿಸಿ ಹೊಸಕಿ ಹಾಕಿ ಹಕ್ಕಿ ಹಾರಿಹೋಗಿದೆ ಎಂದು ಹೇಳುತ್ತಾರೆ.

## 5

**ಯುಗಯುಗಗಳ ಹಣೆಬರೆಹವ ಒರೆಸಿ**
**ಮನ್ವಂತರಗಳ ಭಾಗ್ಯವತೆರೆಸಿ**
**ರೆಕ್ಕೆಯ ಬೀಸುತ ಚೇತನಗೊಳಿಸಿ**
**ಹೊಸಗಾಲದ ಹಸು ಮಕ್ಕಳ ಹರಸಿ**
**ಹಕ್ಕಿ ಹಾರುತಿದೆ ನೋಡಿದಿರಾ !**

| |
|---|
| ಮನ್ವಂತರ–ಪರಿವರ್ತನೆಯ ಕಾಲ; ಹರಸಿ–ಹಾರೈಸಿ |

### ಸಾರಾಂಶ

ಬೇಂದ್ರೆಯವರು ಈ ಪದ್ಯದಲ್ಲಿ ಕಾಲದ ಪರಿವರ್ತನಾ ನಿಯಮ ಹಾಗೂ ಹಾರೈಕೆಯನ್ನು ವಿವರಿಸಿದ್ದಾರೆ. ಕಾಲವು ಯುಗಯುಗಗಳ ಹಣೆಬರೆಹವನ್ನು ,(ಕೆಟ್ಟದ್ದನ್ನು) ಚರಿತ್ರೆಯನ್ನು ಅಳಿಸಿ ಹಾಕಿ ಹೊಸತನವನ್ನು (ಒಳ್ಳೆತನವನ್ನು) ಹೊಸ ಹಣೆಬರೆಹವನ್ನು ಬರೆದು ಎಲ್ಲರಿಗೂ ಬದಲಾವಣೆಯಾಗುವ ಒಳ್ಳೆಯ ಭಾಗ್ಯವನ್ನು ತೆರೆದು ಕೊಟ್ಟಿದೆ. ಹಾಗೆಯೇ ರೆಕ್ಕೆಯ ಬೀಸುತ , ಮೇಲಕ್ಕೆ ಹಾರುತ, ಹಾರುವ ಚೇತನವನ್ನು (ಶಕ್ತಿಯನ್ನು) ನೀಡುತ್ತ , ಈ ಹೊಸಗಾಲದ ಹಸು ಮಕ್ಕಳನ್ನು ಹರಸಿ, ಹಾರೈಸಿ ಬದಲಾವಣೆಯ ಹಾದಿಯನ್ನು ಹಿಡಿದು ಹಕ್ಕಿ ಹಾರಿ ಹೋಗುತ್ತಿದೆ ಎಂದು ಹೇಳುತ್ತಾರೆ.

# ಪದ್ಯಪಾಠ – ೦೩
# ಹಲಗಲಿ ಬೇಡರು

**–ಜನಪದ**

**ಪೀಠಿಕೆ–** ಜನಪದ ಸಾಹಿತ್ಯ ಶ್ರೀಸಾಮಾನ್ಯನ ಅನುಭವ ಹಾಗೂ ಕ್ರಿಯೆಯೊಂದಿಗೆ ಸಹಜ ಸ್ಫೂರ್ತಿಯಿಂದ ಹೊರ ಹೊಮ್ಮಿದ ನುಡಿಮುತ್ತು. ಶಿಷ್ಟಸಾಹಿತ್ಯಕ್ಕೆ ಜನಪದ ಸಾಹಿತ್ಯವೇ ಮೂಲ ಪ್ರೇರಣೆ.ಅದರಲ್ಲಿ ಜನಪದ ಗೀತೆಗಳಿಗೆ ಅಗ್ರಸ್ಥಾನ. ಜನಪದ ಕತೆ, ಗಾದೆ, ಒಗಟು ಮತ್ತು ಲಾವಣಿಗಳೂಪ್ರಮುಖ ಪ್ರಕಾರಗಳು. ನಾಡು, ನುಡಿಗಾಗಿ ಶ್ರಮಿಸಿದ ಸಾಧಕರನ್ನು ಕುರಿತ ವ್ಯಕ್ತಿಚಿತ್ರಗಳು, ಹಾಗೂ ಐತಿಹಾಸಿಕ ವಿವರಗಳನ್ನು ಅಭಿವ್ಯಕ್ತಿಸುವಲ್ಲಿ ಲಾವಣಿಗಳಿಗೆ ಪ್ರಮುಖ ಸ್ಥಾನ.

ಲಾವಣಿಗಳು ಜನಪದ ಸಾಹಿತ್ಯದ ಒಂದು ವಿಶಿಷ್ಟ ಪ್ರಕಾರ. **ಲಾವಣಿ ವೀರತನ, ಸಾಹಸವನ್ನು ವರ್ಣಿಸುವುದರಿಂದ ವೀರಗೀತೆ ಎಂದು ಕರೆಯುತ್ತಾರೆ**. ಏಕ ಘಟನೆಯನ್ನಾಧರಿಸಿದ್ದು ಕಥನಾತ್ಮಕವಾಗಿರುವ ಲಾವಣಿಗಳು ಹಾಡಿನ ರೂಪದಲ್ಲಿ ಕಟ್ಟಿದ ಕತೆ. ಜನಸಾಮಾನ್ಯರು ರಚಿಸಿರುವ ಲಾವಣಿಗಳು ವಸ್ತುನಿಷ್ಠವಾಗಿರುತ್ತವೆ. ಹಿಂದಿನಿಂದ ವಾಕ್ಪರಂಪರೆಯಲ್ಲಿ ಉಳಿದು ಬಂದಿದ್ದು, ಐತಿಹಾಸಿಕ ಮಹತ್ವ ಪಡೆ ದಿವೆ. ಗದ್ಯದ ಹೊಳಹನ್ನು, ಭಾವಗೀತದ ಸತ್ವವನ್ನು ಹೊಂದಿರುವ ಲಾವಣಿಗಳು ಧ್ವನಿ ರಮ್ಯತೆಯನ್ನು ಅರ್ಥಸೌಂದರ್ಯವನ್ನು ಹೊಂದಿವೆ.

ಕನ್ನಡ ನಾಡಿನ ಮೇಲೆ ಪರಗಡಿಗಳಿಂದ ದಾಳಿ–ದಂಗೆ ನಡೆಯುತ್ತಿದ್ದವು. ವೀರರು ಅವುಗಳನ್ನು ತಡೆದು ಕನ್ನಡಿಗರ ಗೌರವವನ್ನು ಉಳಿಸಿದ್ದಾರೆ. ತ್ಯಾಗ, ಬಲಿದಾನಗಳಿಂದ ಅಮರರಾಗಿದ್ದಾರೆ. ಇಂತಹವೀರ ಕಲಿಗಳ ವೀರಸಾಹಸ, ಉಜ್ವಲ ಜೀವನವನ್ನು ವರ್ಣಿಸುವ ಕಥನಾತ್ಮಕ ಕಾವ್ಯಗಳೇ ಲಾವಣಿಗಳು.ಜನತೆಯನ್ನು ಹುರಿದುಂಬಿಸಲು ಗೀತೆಗಳನ್ನು ಕಟ್ಟಿಹಾಡಿದ್ದಾರೆ. ಊರುಗಳನ್ನೇ ಅವರಿಗೆ ಅಂಕಿತಗೊಳಿಸಿದ್ದಾರೆ.ಹಲಗಲಿಯ ಬೇಡರ ಲಾವಣಿ ಅದಕ್ಕೊಂದು ನೈಜ ನಿದರ್ಶನ.

ಹಲಗಲಿಯು ಬೇಡರ ಊರು. ಮುಧೋಳ ಸಂಸ್ಥಾನದಲ್ಲಿದ್ದು, ಇಂದಿನ ಬಾಗಲಕೋಟೆ ಜಿಲ್ಲೆಗೆ ಸೇರಿದೆ. ಅಂದು ಕಲಾದಗಿಯು ಜಿಲ್ಲೆಯ ಸ್ಥಾನ ಹೊಂದಿತ್ತು. ಇಲ್ಲಿಂದ ಉತ್ತರಕ್ಕೆ ಐದಾರು ಕಿಲೋಮೀಟರ್ ದೂರದಲ್ಲಿ ಹಲಗಲಿ ಇದೆ. 'ಹಲಗಲಿಯ ಬಂಟರ ಹತಾರ ಕದನ' ಎಂಬ ವೀರ ರಸಯುಕ್ತವಾದ ಹಾಡುಗಳೇ ಹಲಗಲಿ ಬೇಡರ ಲಾವಣಿಗಳು.

ವ್ಯಾಪಾರಕ್ಕಾಗಿ ಭಾರತಕ್ಕೆ ಬಂದ ಬ್ರಿಟಿಷರು ಆಡಳಿತ ಸೂತ್ರ ಹಿಡಿದರು. 1857 ರ ಪ್ರಥಮಸ್ವಾತಂತ್ರ್ಯ ಸಂಗ್ರಾಮದ ಅನಂತರ ಭಾರತೀಯರ ಮೇಲೆ ನಿಶ್ಯಸ್ತ್ರೀಕರಣದ ಹುಕುಮನ್ನು ಹೊರಡಿಸಿದರು.ಈ ಶಾಸನದ ಪ್ರಕಾರ ಸರ್ಕಾರದ ಅನುಮತಿಯಿರದೆ ಭಾರತೀಯರು ಶಸ್ತ್ರಾಸ್ತ್ರಗಳನ್ನು ಹೊಂದುವಂತಿಲ್ಲ ಮತ್ತು ತಮ್ಮಲ್ಲಿರುವ ಆಯುಧಗಳನ್ನು ಸರ್ಕಾರಕ್ಕೆ ಒಪ್ಪಿಸಬೇಕು ಎಂಬುದಾಗಿತ್ತು. ಈ ಹುಕುಮನ್ನು ವಿರೋಧಿಸಿ ಅಲ್ಲಲ್ಲಿ ದಂಗೆಗಳಾದವು. **ಹಲಗಲಿಯ ರಾಮ, ಬಾಲ, ಹನುಮ, ಜಡಗ** ಮೊದಲಾದ ವೀರರು ತಮ್ಮಲ್ಲಿರುವಆಯುಧಗಳನ್ನು ಕೊಡಲೊಪ್ಪದೆ ದಂಗೆ ಎಬ್ಬಿಸಿ ಹೆಬಲಕ್ ಎಂಬ ಅಧಿಕಾರಿಯನ್ನು ಕೊಲೆಗೈದರು. ಇದರಿಂದ ಕ್ರೋಧಗೊಂಡ ಕಾರಸಾಹೇಬ ಕಲಾದಗಿಯಿಂದ ದಂಡು ಕಳುಹಿಸಿ ಹಲಗಲಿಯನ್ನು ಮುತ್ತಿ ದಂಗೆ ಎದ್ದವರನ್ನು ಬಗ್ಗುಬಡಿದನು. ಕಂಪೆನಿ ಸರ್ಕಾರದ ದೌರ್ಜನ್ಯವನ್ನು ವಿರೋಧಿಸಿದ ಕಥಾನಕವೇ ಈ ಲಾವಣಿ.

ಆ ಸಂದರ್ಭದಲ್ಲಿ ಅನಕ್ಷರಸ್ಥ ಸಮುದಾಯದಲ್ಲಿದ್ದ ಸ್ವಾತಂತ್ರ್ಯಪ್ರೇಮವನ್ನು ಪರಿಚಯಿಸಿ ದೇಶ ಪ್ರೇಮವನ್ನು ವಿದ್ಯಾರ್ಥಿಗಳಲ್ಲಿ ಬೆಳೆಸುವುದು ಇಲ್ಲಿನ ಆಶಯ. ಈ ಲಾವಣಿಯನ್ನು **ಡಾ॥ ಬಿ.ಎಸ್. ಗದ್ದಗಿಮಠ** ಅವರು ಸಂಪಾದಿಸಿರುವ **ಕನ್ನಡ ಜನಪದ ಗೀತೆಗಳು** ಕೃತಿಯಿಂದ ಆಯ್ದು ಸಂಪಾದಿಸಿ ನೀಡಲಾಗಿದೆ.


**ಹೊತ್ತು ಬಂದಿತು ಮತ್ತ ನೋಡಿರಿ ಕತ್ತಿ ಹಿಡಿಯುವ ಜನಕ**
**ಸಿಟ್ಟಿನ ಮಂದಿ ಹಲಗಲಿ ಬಂಟರು ಮುಟ್ಟಲಿಲ್ಲೊ ದಡಕ ॥ ಪ ॥**

| |
|---|
| ಹೊತ್ತು–ಸಮಯ ,ಕತ್ತಿ ಹಿಡಿಯುವ ಜನ–ಬೇಡರು ಬಂಟರು–ವೀರರು |

## ಸಾರಾಂಶ

ಕತ್ತಿ ಹಿಡಿದು ಹೋರಾಡುವ ಸಿಟ್ಟಿನ ಜನ ಹಲಗಲಿಯ ಬೇಡರಿಗೆ ಹೋರಾಡುವ ಸಮಯ ಬಂದಿತು. ಇಂತಹ ಹಲಗಲಿಯ ವೀರರು ಹೋರಾಡಿದರೂ ಅವರು ತಮ್ಮ ಗುರಿಯನ್ನು ಮುಟ್ಟಲು ಸಾಧ್ಯವಾಗಲಿಲ್ಲ.

**ವಿಲಾತಿಯಿಂದ ಹುಕುಮ ಕಳಿಸಿತು ಕುಂಪಣಿ ಸರಕಾರ**
**ಎಲ್ಲ ಜನರಿಗೆ ಜೋರ ಮಾಡಿ ಕಸಿದು ಕೊಳ್ಳಿರಿ ಹತಾರ**
**ಹಲಗರಹಳ್ಳಿ ಮುಧೋಳ ಹತ್ತರ ಮೆರೆಯಿತೊ ಸುತ್ತಮುತ್ತ**
**ಪೂಜೇರಿ ಹನುಮಾ ಬ್ಯಾಡರ ಬಾಲ ಜಡಗರಾಮ ಮಸಲತ್ತ**
**ಕೈಯಾನ ಹತಾರ ಕೊಡಬಾರದೊ, ನಾವು ನಾಲ್ಕು ಮಂದಿ ಜತ್ತ**
**ಹತಾರ ಹೋದಿಂದ ಬಾರದು ಜೀವ ಸತ್ತು ಹೋಗುವುದು ಗೊತ್ತ**
**ಹೊಡಿರಿ ಜಗಳ ಕೂಡಿ ತೀರ್ತೇವು ಕುಮಕಿ ನಮ್ಮದ್ಯಾವತ್ತ**
**ಒಳಗಿಂದೊಳಗ ವಚನ ಕೊಟ್ಟರೊ ಬ್ಯಾಡರೆಲ್ಲ ಕಲ್ತ.**
**ಕಾರಕೂನನ ಕಪಾಳಕ ಬಡಿದರ ಸಿಪಾಯಿ ನೆಲಕಬಿತ್ತ**
**ಆಗಿಂದಾಗ ದುಃಖದ ಸುದ್ದಿ ಸಾಹೇಬಗ ಹೋಯ್ತ ॥1॥**



| |
|---|
| ವಿಲಾತಿ – ವಿಲಾಯಿತಿ; ಹುಕುಂ – ಆದೇಶ ; ಹತಾರ – ಆಯುಧ ; ಮಸಲತ್ತು – ಪಿತೂರಿ ;ಕುಮಕಿ – ಸಹಾಯ, ಒತ್ತಾಸೆ ; ಕಾರಕೂನ – ಗುಮಾಸ್ತ ; |

## ಸಾರಾಂಶ

ಬ್ರಿಟೀಷ್ ಸರ್ಕಾರ(ಬ್ರಿಟೀಷ್ ಈಸ್ಟ್ ಇಂಡಿಯಾ ಕಂಪನಿ) ವಿಲಾಯಿತಿಯಿಂದ (ವಿದೇಶ) ಇಲ್ಲಾ ಜನರಿಗೆ ಜೋರಮಾಡಿ ಆಯುಧಗಳನ್ನೆಲ್ಲ ಕಸಿದು ಕೊಳ್ಳಿರಿ ಎಂದು ಆದೇಶವನ್ನು ಕಳಿಸಿತು. ಮುಧೋಳದ ಹತ್ತಿರ ಇರುವ ಹಲಗರಹಳ್ಳಿ{ಹಲಗಲಿ}ಜನ ಇದರ ವಿರುದ್ಧ ಹೋರಾಡಿ ಸುತ್ತ–ಮುತ್ತ ಪ್ರಸಿದ್ಧಿಯಾಗುವಂತೆ ಮೆರೆಯಿತು. ಹಲಗಲಿಯ ಪ್ರಮುಖರಾದ ಪೂಜಾರಿ ಹನುಮಾ, ಬ್ಯಾಡರ ಬಾಲ, ಜಡಗ, ರಾಮ ಎಂಬ ನಾಲ್ಕು ಮಂದಿ ಕೂಡಿಕೊಂಡು ನಾವು ನಮ್ಮ ಬಳಿಯಿರುವ ಆಯಧಗಳನ್ನು ಸತಾಯಿಸಿದರೂ ಕೊಡಬಾರದು.ಆಯುಧಗಳು ಹೋದರೆ (ನಮ್ಮ ಅನ್ನಕ್ಕೆ ಸಂಚಕಾರ ಬಂದು) ನಮ್ಮ ಜೀವ ಸತ್ತು ಹೋಗುತ್ತದೆ ಎಂದು ಪಿತೂರಿ ಮಾಡಿದರು. ನಾವು ಯಾವಾಗಲೂ ನಿಮ್ಮ ಸಹಾಯಕ್ಕೆ ಕೂಡಿಕೊಂಡು ಇರುತ್ತೇವೆ ಅವರ ಜೊತೆ(ಆಯುಧಗಳನ್ನು ಕಸಿದುಕೊಳ್ಳಲು ಬಂದವರ ಜೊತೆ) ಜಗಳ ತೆಗೆಯಿರಿ ಎಂದು ಹಲಗಲಿಯ ಬೇಡರೆಲ್ಲ ಒಂದೆಡೆ ಸೇರಿಕೊಂಡು ಒಳಗಿಂದೊಳಗೆ ಮಾತು ಕೊಟ್ಟರು. ಆಯುಧಗಳನ್ನು ಕಸಿದುಕೊಳ್ಳಲು ಬಂದ ಗುಮಾಸ್ತನ ಕಪಾಳಕ್ಕೆ ಹೊಡೆದರು. ಈ ದುಃಖದ ಸುದ್ದಿಯನ್ನು ತಕ್ಷಣ ಸಿಪಾಯಿಯೊಬ್ಬನು ತನ್ನ ಸಾಹೇಬನಿಗೆ(ಸೆನೇಟ್ಕರ್) ಮುಟ್ಟಿಸಿದನು.

**ಸಿಟ್ಟಿಲಿ ಮುಂಗೈ ಕಟ್ಟನೆ ಕಡಕೊಂಡ, ಹುಕುಮ ಕೊಟ್ಟ ಸಾಹೇಬಾಗ**
**ಕುದರಿ ಮಂದಿ ಕೂಡಿ ಮುಟ್ಟಿತೊ ಹಲಗಲಿ ತಳದ ಮ್ಯಾಗ**
**ಒಳಗಿನ ಮಂದಿ ಗುಂಡು ಹೊಡಿದರೊ ಮುಂಗಾರಿ ಸಿಡಿಲ ಸಿಡಿದ್ಹಾಂಗ**
**ಹೊರಗಿನ ಮಂದಿ ಗುಂಡ ಹತ್ತಿ ಸರಿದು ನಿಂತರೊ ಹಿಡಿದು ದಂಗ**
**ಕಾಗದ ಬರೆದು ಕಳುವ್ಯಾರೆ ಬೇಗ, ದಂಡು ಬರಲೆಂತ ಹೀಂಗ**
**ದಂಡ ಬಂದಿತೊ ತಯಾರಾಗಿ ಜಲದ ಮಾಡಿ ಹಲಗಲಿಗಿ ||2||**

| |
|---|
| ದಂಡು – ಸೈನ್ಯ; ಜಲದ – ತೀವ್ರ |

## ಸಾರಾಂಶ

ಸಾಹೇಬ ಈ ವಿಷಯವನ್ನು ತಿಳಿದು ಸಿಟ್ಟಿನಲ್ಲಿ ಕೈಗಳನ್ನು ಕಿವುಚಿಗೊಂಡು ಸೈನಿಕರಿಗೆ ಆದೇಶವನ್ನು ನೀಡಿದನು. ಆಗ ಆಶ್ವದಳ.ಕಾಲ್ದಳ ಸೇರಿಕೊಂಡು ಹಲಗಲಿಯ ಸ್ಥಳವನ್ನು ಮಟ್ಟಿತು. ಇದನ್ನು ನೋಡಿದ ಹಲಗಲಿಯ ಜನ ಮುಂಗಾರಿನ ಸಿಡಿಲು ಸಿಡಿಯುವ ಹಾಗೆ ಒಳಗಿನಿಂದ ಗುಂಡುಗಳನ್ನು ಹೊಡೆದರು. ಇದರಿಂದ ಹೊರಗಿನ ಜನರಿಗೆ( ಬ್ರಿಟೀಷ್ ಸೈನಿಕರು)ಗುಂಡುಗಳು ಬಿದ್ದಾಗ ದಂಗು(ಹೆದರಿ)ಹಿಡಿದು ಹಿಂದೆ ಸರಿದು ನಿಂತರು. ಆಗ ಇನ್ನು ಹೆಚ್ಚಿನ ಸೈನ್ಯ ಬರಲಿ ಎಂದು ಸಾಹೇಬ(ಸೆನೆಟ್ಕರ್) ಪತ್ರ ಬರೆದು ಮೇಲಿನ ಅಧಿಕಾರಿಗೆ ಕಳಿಸಿದನು. ತೀವ್ರವಾಗಿ(ವೇಗವಾಗಿ) ಸೈನ್ಯ ತಯಾರಾಗಿ ಹಲಗಲಿಗೆ ಬಂದಿತು.

**ಬೆನ್ನಬೆನ್ಹತ್ತಿ ತಿರಿತಿರ್ವಿ ಕಡಿದರೊ ಏನು ಉಳಿಯದ್ಹಂಗ**
**ನಡುವೆ ಹಾಕ್ಕೊಂಡು ಹೊಡದರೊ ಗುಂಡ ಕರುಣ ಇಲ್ಲದ್ಹಂಗ**
**ಚಟೆಕಾರರು ಚೌಕಿ ಮಾಡುತ, ನಡಿದರೊ ಹೇಳದೆ ಗುಡದಾಗ**
**ಅಗಸಿಗೆ ಬಂದು 'ಹೆಬಲಕ' ಸಾಬ ಹೇಳತಾನ ಬುದ್ಧಿಮಾತ**
**ಕೊಡುತಿವಿ ಕಬುಲ ಕೇಳರಿ ಮಾತ, ಹೋಗಬ್ಯಾಡರಿ ಸತ್ತ**
**ಅನುವ ಮಾತಿಗೆ ನಂಬಿಗೆ ಸಾಲದೆ 'ಹನುಮ' ಬಂದನೊ ಮುಂದಿತ್ತ ||3||**

| |
|---|
| ಅಗಸಿ – ಹೆಬ್ಬಾಗಿಲು |

## ಸಾರಾಂಶ

ಅಲ್ಲಿಗೆ ಬಂದ ದಂಡು ಬೇಡರನ್ನು ಹಿಂದೆ ಹಿಂದೆ ಹೋಗಿ ತಿರುತಿರುವಿ ಹಾಕಿ ಏನು ಉಳಿಯದ ಹಾಗೆ ಕಡಿದು ಹಾಕಿದರು. ಬೇಡರನ್ನು ಮಧ್ಯಕ್ಕೆ ಹಾಕಿಕೊಂಡು ಕರುಣೆ ಇಲ್ಲದ ಹಾಗೆ (ಕರುಣೆ ತೋರದೆ)ಗುಂಡನ್ನು ಹೊಡೆದರು.ಚಟೆಕಾರರು(ಆಂಗ್ಲೋಇಂಡಿಯನ್ಸ್/ಭಾರತೀಯ ಬ್ರಿಟೀಷರು) ಬೇಡರನ್ನು ಕಾವಲು ಕಾಯುತ್ತ ಇರುವಾಗ ಬೇಡರು ಗುಡ್ಡದ ಕಡೆ ಹೋದರು. ಆಗ ಸಾಹೇಬ(ವಿಲಿಯಂ ಹೆನ್ರಿ ಹೆವಲಾಕ್) ಊರಿನ ಹೆಬ್ಬಾಗಿಲಿಗೆ ಬಂದು ಬುದ್ಧಿ ಮಾತನ್ನು ಹೇಳುತ್ತಾನೆ, ಶರಣಾಗಲು ಒಪ್ಪಿಗೆ ನೀಡುತ್ತೇವೆ ಸತ್ತು ಹೋಗಬೇಡಿರಿ ಎನ್ನುವ ಮಾತಿನ ಮೇಲೆ ನಂಬಿಗೆ ಸಾಲದೆ ಹನುಮ ಮುಂದೆ ಬಂದು ನಿಂತನು.

**ಜಡಗ ಹೇಳುತಾನೊ ಹೊಡೆಯಿರಿ ಇವರ ಪೂರ ಘಾತಕರಾ**
**ಇಸವಾಸಘಾತಕ ಮಾಡಿದರಿವರ, ನಂಬಿಗಿಲ್ಲ ನಮಗ ಪಿತೂರಾ**
**ಮೋಸ ಮಾಡಿ ನಮದೇಶ ಗೆದಿತಾರೊ ಮುಂದ ನಮಗ ಘೋರಾ**
**ಅಂದು ಹೊಡೆದಾನೊ ಒಂದು ಗುಂಡಿಗೆ ಆದ ಸಾಹೇಬನ ಟಾರಾ**

**‘ಕಾರ’ ಸಾಹೇಬ ಬೆಂಕಿ ಚೂರಾದ ಲೂಟಿ ಮಾಡಂತನೊ ಊರಾ**
**ಸಿಟ್ಟಿಲೆ ಹೊಡೆದರು ಸಿಡಿಲಸಿಡಿದ್ಹಾಂಗ ಗುಂಡು ಸುರಿದಾವ ಭರ್‌ಪೂರ**
**ಹನುಮ ಹೇಳತಾನ ಗುಂಡು ಹೊಡಿದು ಕೆರ ಕೆಡವು ನಷ್ಟ ಬಾರ**
**ಮುನ್ನೂರ ಮಂದಿ ಮೈಮ್ಯಾಗ ಬಂದರ ಆಗ ನೋಡೊ ಜೋರಾ**

**ಭೀಮನು ಇದುರಿಗೆ ನಿಂತಾ ಐನೂರ್ಮಂದಿಗೆ ಮತ್ತಾ**
**ಬಾಲನು ಮಾಡಿದ ಕಸರತ್ತಾ. ಕುದುರಿಯ ಕಡಿದು ಹತ್ತಿಪ್ಪತ್ತಾ**
**ರಾಮನ ಕಡಿತ ವಿಪರೀತಾ. ಕಾಲುವೆ ಹರಿತೊ ರಕ್ತಾ**
**ಸಾವಿರ ಆಳಿಗೆ ಒಬ್ಬ ಕೂಗತಾನೊ, ಕಡಿಕಡಿರಿ ಅಂತ ಮತ್ತಾ**
**ನಾಲ್ಕು ಮಂದಿ ಹಿಂಗ ಕಡಿದು ಸತ್ತರೊ ಹಲಗಲಿ ಬಂಟರಣ್ಣ ಜನಕ ॥4॥**

ಘಾತಕ – ದ್ರೋಹಿ ; ಘಾತಕರು–ಮೋಸಗಾರರು,ವಂಚಕರು; ಪಿತೂರಿ–ಕುತಂತ್ರ,ಒಳಸಂಚು ;ಘೋರ – ಆಪತ್ತು, ತೀಕ್ಷ್ಣ; ಭರಪೂರ–ಯತೇಚ್ಛ ; ಕಸರತ್ತು –ಚಮತ್ಕಾರ.

## ಸಾರಾಂಶ

ಜಡಗ ಹೇಳುತ್ತಾನೆ ಇವರನ್ನು ಹೊಡಿಯಿರಿ , ಇವರು ಸಂಪೂರ್ಣವಾಗಿ ಮೋಸಗಾರರು, ವಿಶ್ವಾಸವಂಚಕರು ಇವರ ಮೇಲೆ ನಂಬಿಗೆ ಇಲ್ಲ. ಒಳಸಂಚಿನಿಂದ ಮೋಸಮಾಡಿ ನಮ್ಮ ದೇಶ ಗೆಲ್ಲುತ್ತಾರೆ.ಮುಂದೆ ನಮಗೆ ಆಪತ್ತು ಕಾದಿದೆ ಎಂದು ಗುಂಡು ಹೊಡೆಯುತ್ತಾನೆ. ಸಾಹೇಬ ಭಯಭೀತನಾಗುತ್ತಾನೆ. ಇದರಿಂದ ಸಿಟ್ಟಿಗೆದ್ದು ಊರನ್ನೆಲ್ಲಾ ಲೂಟಿ ಮಾಡಿರಿ ಎಂದು ಹೇಳುತ್ತಾನೆ. ಆಗ ಸೈನಿಕರು ಸಿಟ್ಟನಲ್ಲಿ ಸಿಡಿಲು ಸಿಡಿದ ಹಾಗೆ ಗುಂಡುಗಳನ್ನು ಹೊಡೆದರು, ಗುಂಡುಗಳು ಯತೇಚ್ಛವಾಗಿ ಸುರಿದವು. ಆಗ ಹನುಮ ಹೇಳುತ್ತಾನೆ ಗುಂಡು ಹೊಡೆದು ಇವರನ್ನು ಸಾಲಾಗಿ ಕೆಡವಿ ನಾಶ ಮಾಡಿರಿ. ತಕ್ಷಣ ಮೂರುನೂರು ಜನ ಸೈನಿಕರು ಮೈಮೇಲೆ ಎರಗಿದರು. ಆಗ ಕದನ ಜೋರಾಯ್ತು. ಭೀಮನು ಎದುರಿಗೆ ನೀಂತ ಐದು ನೂರು ಮಂದಿಯನ್ನು, ಬಾಲನು ಚಮತ್ಕಾರ ಮಾಡಿ ಹತ್ತಿಪ್ಪತ್ತು ಕುದುರೆಗಳನ್ನು ಕಡಿದು ಹಾಕಿದರು.ರಾಮನ ವಿಪರೀತ ಕಡಿತದಿಂದ ರಕ್ತದ ಕಾಲುವೆಯೇ ಹರಿಯಿತು. ಸಾವಿರ ಜನರಿಗೆ(ಹಲಗಲಿಯ ಜನರಿಗೆ) ಒಬ್ಬ ಕೂಗಿ ಹೇಳುತ್ತಾನೆ ಮತ್ತೆ ಮತ್ತೆ ಕಡಿದು ಹಾಕಿರೋ ಎಂದು. ಹೀಗೆ ನಾಲ್ಕು ಮಂದಿ ಕಡಿದು ಸತ್ತು ಹೋದರು.ಇವರು ಹಲಗಲಿಯ ಜನಕ್ಕೆ ವೀರರು.

**ಕೊಡಲಿ ಕೋರೆ ಕುಡ ಕಬ್ಬಿಣ ಮೊಸರು ಬೆಣ್ಣೆ ಹಾಲಾ**

**ಉಪ್ಪು ಎಣ್ಣೆ ಅರಿಸಿಣ ಜೀರಗಿ ಅಕ್ಕಿಸಕ್ಕಾರಿ ಬೆಲ್ಲಾ**
**ಗಂಗಳ ಚೆರಗಿ ಮಂಗಳ ಸೂತ್ರ ಹೋದವು ಬೀಸುಕಲ್ಲಾ**
**ಹಾಳಾಗಿ ಹೋಯಿತು ಅತ್ತು ವರ್ಣಿಸಿ ಹೇಳಲಿ ನಾನೆಷ್ಟಾ**
**ಸಿಕ್ಕದ್ದು ತಗೊಂಡು ಸರದ ನಿಂತರೊ ಊರಿಗೆ ಕೊಳ್ಳಿ ಕೊಟ್ಟಾ**
**ಬೂದಿ ಮಾಡ್ಯಾರೊ ಹಲಗಲಿ ಸುಟ್ಟು ಗುರ್ತುಳಿಯಲಿಲ್ಲೆಳ್ಳಷ್ಟು**
**ಕಾಣದೆ ಹೋಯಿತೊ ಕೆಟ್ಟು ವರ್ಣಿಸಿ ಹೇಳಿದೆ ಕಂಡಷ್ಟು**
**ಕುರ್ತಕೋಟಿ ಕಲ್ಮೇಶನ ದಯದಿಂದ ಹಾಡಿದೆನಣ್ಣಾ ಜನಕಾ ॥5॥**

ಕೋರೆ–ಕುಡಗೋಲು.(ರಾಗಿ,ಭತ್ತ ಇತ್ತಾದಿ ಪೈರುಗಳನ್ನು ಕತ್ತರಿಸಲು ಬಳಸುವ ವಕ್ರವಾಗಿರುವ ಸಾಧನ ಬೇಡರು ಬೇಟೆಯಾಡಲು ಬಳಸುತ್ತಿದ್ದರು) ಕುಡ– ನೇಗಿಲು,ಕುಂಟಿಗಳಿಗೆ ಹಾಕುವ ಕಬ್ಬಿಣದ ಪಟ್ಟಿ ; ಚರಿಗೆ – ತಂಬಿಗೆ ; ಕೊಳ್ಳಿ – ಬೆಂಕಿ

## ಸಾರಾಂಶ

ಕೊಡಲಿ, ಕುಡಗೋಲು, ಕುಡ, ಕಬ್ಬಿಣ, ಮೊಸರು ,ಬೆಣ್ಣೆ, ಹಾಲು, ಉಪ್ಪು ,ಎಣ್ಣೆ ,ಅರಿಸಿಣ, ಜೀರಗಿ , ಅಕ್ಕಿ, ಸಕ್ಕರೆ, ಬೆಲ್ಲ, ಗಂಗಳ, ತಂಬಿಗೆ, ಮಂಗಳಸೂತ್ರ, ಬೀಸುವಕಲ್ಲು – ಹೀಗೆ ಸಿಕ್ಕಿದ್ದೆಲ್ಲಾ ತೆಗೆದುಕೊಂಡು(ಲೂಟಿ ಮಾಡಿ) ಹೋಗಿದ್ದರಿಂದ ಹಾಳಾಗಿ ಹೋಯಿತು. ಇದನ್ನು ನಾನೆಷ್ಟು ವರ್ಣಿಸಿ ಹೇಳಲಿ, ಊರಿಗೆ ಬೆಂಕಿ ಇಟ್ಟು ಸುಟ್ಟು ದೂರ ನೀಂತರು. ಬೂದಿ ಮಾಡಿ ಹಲಗಲಿಯ ಎಳ್ಳಷ್ಟು(ಎಳ್ಳುಕಾಳು) ಗುರುತು ಉಳಿಯದೆ ಕಾಣದೆ ಹೋಯಿತು. ಇದನ್ನು ಕೆಡಿಸಿ ವರ್ಣಿಸಿ ಹೇಳದೆ ಕಂಡೊಷ್ಟು ಕುರ್ತುಕೋಟಿಯ ಕಲ್ಮೇಶನ ದಯದಿಂದ ಹಾಡಿದೆನೋ ಅಣ್ಣಾ ಜನಕ್ಕೆ ತಿಳಿಸಲು ಹಾಡಿದೆನು.



**ಪದ್ಯಪಾಠ – 04**

## ವಚನಸೌರಭ

ಕನ್ನಡ ಸಾಹಿತ್ಯಚರಿತ್ರೆಯಲ್ಲಿ ಹನ್ನೆರಡನೆಯ ಶತಮಾನಕ್ಕೆ ವಿಶೇಷ ಮಹತ್ತ್ವವಿದೆ.ಧಾರ್ಮಿಕವಾಗಿ ಹಾಗೂ ಭಾಷಿಕವಾಗಿ ಹೊಸತನವನ್ನು ತರಬೇಕು, ತನ್ಮೂಲಕ ನವಸಮಾಜ ನಿರ್ಮಾಣವಾಗಬೇಕೆಂದು ಕನಸು ಕಂಡ ವಚನಕಾರರು ನಿತ್ಯ ಸ್ಮರಣೀಯರು, ಜನಸಾಮಾನ್ಯರ ಬದುಕು ಹಸನಾಗಬೇಕು, ವರ್ಗರಹಿತ ಸಮಾಜ ನಮ್ಮದಾಗಬೇಕು ಎಂದು ಹಂಬಲಿಸಿದ ಚಿಂತನೆ ಇಂದಿಗೂ ಸ್ವಾಗತಾರ್ಹ. ಜನಸಾಮಾನ್ಯರ ಆಡುಭಾಷೆಯನ್ನು ಸಾಹಿತ್ಯದ ಗದ್ದುಗೆಗೆ ಏರಿಸಿದ ಕೀರ್ತಿಯೂ ಇವರದೆ. ಆರಾಧ್ಯ ದೈವದ ಹೆಸರಿನಲ್ಲಿ ಅಂತರಂಗದ ಧ್ವನಿಯನ್ನು ಅಭಿವ್ಯಕ್ತಗೊಳಿಸಿದ್ದು ಒಂದು ವಿಶೇಷ. ಅಚ್ಚಗನ್ನಡಶೈಲಿ, ಭಾವಗೀತಾತ್ಮಕ ಲಯಬದ್ಧತೆ ವಚನಸಾಹಿತ್ಯದ ಮೌಲ್ಯವನ್ನು ಹೆಚ್ಚಿಸಿವೆ. ಮೌಢ್ಯವನ್ನು ಮರೆಯಾಗಿಸಬೇಕೆಂಬ ಹಂಬಲದ ಜೊತೆಗೆ ಮಹಿಳೆಯರಿಗೂ ಸಮಾನ ಸ್ಥಾನಮಾನವನ್ನು ನೀಡಿದ್ದು ವಚನಯುಗದ ವಿಶೇಷ. ಆದ್ಯವಚನಕಾರರಲ್ಲಿ ಜೇಡರದಾಸಿಮಯ್ಯ ಮತ್ತು ಭಕ್ತಿಭಂಡಾರಿ ಬಸವಣ್ಣನವರ ವಚನಗಳನ್ನು ಪರಿಚಯಾತ್ಮಕ ಅಭ್ಯಾಸಕ್ಕೆ ಅಳವಡಿಸಲಾಗಿದೆ.




### ಕವಿ ಪರಿಚಯ

**ಜೇಡರದಾಸಿಮಯ್ಯ:** ಹನ್ನೊಂದನೆಯ ಶತಮಾನದಲ್ಲಿದ್ದ ಹಿರಿಯ ಶಿವಶರಣ. ಯಾದಗಿರಿ ಸನಿಹದ ಮುದೇನೂರಿನವನಾದ ದಾಸಿಮಯ್ಯ ಆದ್ಯವಚನಕಾರನೆಂದೇ ಮಾನ್ಯನಾಗಿದ್ದಾನೆ. **'ರಾಮನಾಥ'** ಎಂಬ ಅಂಕಿತದಿಂದ ರಚಿಸಿರುವ ಈತನ 150 ವಚನಗಳು ದೊರೆತಿವೆ. ಸರಳ ಮತ್ತು ನೇರ ನಿರೂಪಣೆಯಿಂದಕೂಡಿರುವ ದಾಸಿಮಯ್ಯನ ವಚನಗಳು ಸಾಮಾಜಿಕ ಮೌಲ್ಯಗಳಿಂದ ಜನಮಾನ್ಯವಾಗಿವೆ.

ಭಕ್ತಿ ಮತ್ತು ನಿಷ್ಠೆ ಬದುಕಿನ ವಿಶಿಷ್ಟ ಜೀವನ ಮೌಲ್ಯಗಳು. ಜೀವನದಲ್ಲಿ ದಾಂಪತ್ಯ ಅತ್ಯಂತ ಪವಿತ್ರವಾದ ಸಂಬಂಧ. ಮನಃಪೂರ್ವಕವಾಗಿ ಒಂದಾದ ಸತಿ–ಪತಿಯರ ಭಕ್ತಿ ಭಗವಂತನಿಗೆ ಅತ್ಯಂತ ಪ್ರಿಯವಾದುದು. ನಿಷ್ಕಲ್ಮಶವಾದ ಭಕ್ತಿಯೇ ಸರ್ವಶ್ರೇಷ್ಠ. ಹೊಂದಾಣಿಕೆಯಿರದ ಭಕ್ತಿ ಅದಕ್ಕೆ ವಿರುದ್ಧವಾದುದು. ಭಕ್ತಿಯಸಾಕಾರಕ್ಕೆ ನಿಷ್ಠೆ ಮುಖ್ಯ, ನಡೆ–ನುಡಿ ಒಂದಾದ ಭಕ್ತಿ ಸರ್ವಮಾನ್ಯವಾದುದು. ಸಾತ್ವಿಕ ಬದುಕಿನ ಸಾರ್ಥಕತೆದೃಢವಾದ ಸಾಮರಸ್ಯದ ಭಕ್ತಿ ಮತ್ತು ನಿಷ್ಟೆಯಿಂದ ಸಾಕ್ಷಾತ್ಕಾರವಾಗಬಲ್ಲದು.

ವಚನಸೌರಭದ **ಜೇಡರದಾಸಿಮಯ್ಯನ** ವಚನಗಳನ್ನು **ಫ.ಗು. ಹಳಕಟ್ಟಿ** ಅವರು ಸಂಪಾದಿಸಿರುವ **'ದಾಸಿಮಯ್ಯನ ವಚನಗಳು'** ಕೃತಿಯಿಂದ ಆಯ್ಕೆಮಾಡಲಾಗಿದೆ.

**ಸತಿಪತಿಗಳೊಂದಾದ ಭಕ್ತಿ ಹಿತವಾಗಿಪ್ಪುದು ಶಿವಂಗೆ**
**ಸತಿಪತಿಗಳೊಂದಾಗದವನ ಭಕ್ತಿ**
**ಅಮೃತದೊಳು ವಿಷ ಬೆರೆದಂತೆ ಕಾಣಾ ರಾಮನಾಥ** ॥1॥



ಹಿತ–ಒಳಿತು ,ಅಮೃತ– ದೇವತೆಗಳು ಮತ್ತು ರಾಕ್ಷಸರು ಕೂಡಿ ಸಮುದ್ರಮಥನ ಮಾಡಿದಾಗ ಹುಟ್ಟಿದ ರಸ (ಸಾವಿಲ್ಲದ)

### ಸಾರಾಂಶ

ಸತಿ–ಪತಿಗಳು ಒಂದಾಗಿ ಮನಃಪೂರ್ವಕವಾಗಿ ಮಾಡುವ ಭಕ್ತಿ ಶಿವನಿಗೆ (ಭಗವಂತ) ಅತ್ಯಂತ ಹಿತ(ಪ್ರಿಯ)ವಾದುದು. ಸತಿ–ಪತಿಗಳು ಒಂದಾಗಿ ಮಾಡದ ಭಕ್ತಿ ಅಮೃತದಲ್ಲಿ ವಿಷ ಬೆರೆಸಿದಂತೆ ಕಹಿಯಾಗಿರುತ್ತದೆ ಇಂತಹ ಭಕ್ತಿ ಭಗವಂತನಿಗೆ ಇಷ್ಟವಾಗುವುದಿಲ್ಲ

**ಭಾವಾರ್ಥ**

(ಕನಕದಾಸರು ಹೇಳುವಂತೆ 'ಸನ್ನೆಯರಿತು ನಡೆಯುವ ಸತಿ ಇರಬೇಕು', ಶ್ರೀಪಾದರಾಜರು ಹೇಳುವಂತೆ 'ಸತಿ ಅನುಕೂಲಬೇಕು' ಅಂದರೆ ಮುಕ್ತಿಯನ್ನು ಸಾಧಿಸಬಹುದು. ಹಾಗೆಯೇ ದಾಂಪತ್ಯದಲ್ಲಿ ಪರಸ್ಪರ ಸಹಕಾರ ,ಸಹಾಯ ,ಪ್ರೀತಿ–ವಿಶ್ವಾಸ ಇರಬೇಕು ಹಾಗಿರದಿದ್ದರೆ ಅಮೃತದಲ್ಲಿ ವಿಷ ಬೆರೆಸಿದಂತಾಗುತ್ತದೆ, ಪತಿಯಾದವರೂ ಕೂಡ ಹಮ್ಮು–ಬಿಮ್ಮು ತೊರೆದು ತನ್ನ ಸತಿಯಲ್ಲಿ ಅನುನಯನದಿಂದ ನಡೆದುಕೊಳ್ಳಬೇಕು. ಅಂದರೆ ಗಂಡ ಹೆಂಡಿರ ಬದುಕಿನ ರೀತಿ–ನೀತಿ ಒಂದೇ ಆಗಿರಬೇಕು; 'ಎತ್ತು ಏರಿಗೆ,ಕೋಣ ಕೆರೆಗೆ' ಎಂಬಾಂತಾಗಬಾರದು ಪರಸ್ಪರ ಪ್ರೀತಿಯಿಂದ ಭಾವ–ವಿಚಾರ ಆಚರಣೆಯುಳ್ಳವರಾಗಿರಬೇಕು )

**ನಿಷ್ಠೆಯುಳ್ಳ ಭಕ್ತ ನಟ್ಟಡವಿಯಲ್ಲಿದ್ದಡೇನು**
**ಅದು ಪಟ್ಟಣವೆಂದೆನಿಸುವುದು**
**ನಿಷ್ಠೆಯಿಲ್ಲದ ಭಕ್ತ ಪಟ್ಟಣದಲ್ಲಿದ್ದಡೂ**
**ಅದು ನಟ್ಟಡವಿ ಕಾಣಾ ರಾಮನಾಥ ||2||**

| |
|---|
| ನಿಷ್ಠೆ–ಶ್ರದ್ಧೆ; ನಟ್ಟಡವಿ–ಕಾಡಿನಮಧ್ಯಭಾಗ |

**ಸಾರಾಂಶ**

ಶ್ರದ್ಧಾಭಕ್ತಿಯುಳ್ಳ ಭಕ್ತ ಅಡವಿಯ ಮಧ್ಯಭಾಗದಲ್ಲಿ ಇದ್ದರೂ ಅದು ಅವನಿಗೆ ಪಟ್ಟಣ ಎಂದೆನಿಸುವುದು ಶ್ರದ್ಧಾಭಕ್ತಿಯಿಲ್ಲದ ಭಕ್ತ ಪಟ್ಟಣದಲ್ಲಿದ್ದರೂ ಅದು ಅಡವಿಯ ಮಧ್ಯಭಾಗದಲ್ಲಿ ಇದ್ದೇನೆಂದು ಭಯ ಆವರಿಸಿಕೊಳ್ಳುತ್ತದೆ.

**ಭಾವಾರ್ಥ**

(ಭಗವಂತನ ಮೇಲೆ ಭಕ್ತಿ ತೋರಿಕೆಯದಾಗಿರದೆ ಭಗವಂತನ ಸಾನಿಧ್ಯದಲ್ಲಿ ನಿಷ್ಠೆಯಿಂದ ಮನಸ್ಸು ಇರಬೇಕು ಅಂದಾಗ ಮಾತ್ರ ಭಗವಂತ ಒಲಿಯುತ್ತಾನೆ. ನಾವು ಯಾವುದೇ ಕಾರ್ಯವನ್ನು ಮಾಡಿದರೂ ಅತ್ಯಂತ ಶ್ರದ್ಧಾಭಕ್ತಿಯಿಂದ ಮನಸ್ಸಿಟ್ಟು ಮಾಡಬೇಕು . ನಿಷ್ಕಲ್ಮಶವಾದ ನಿಷ್ಠೆಯಿಂದ ಮಾಡಿದ ಕಾರ್ಯ ಯಶಸ್ವಿಯಾಗುತ್ತದೆ. ಇಲ್ಲದೆ ಹೋದರೆ ಕಾರ್ಯ ಯಶಸ್ವಿಯಾಗದೆ ನಿಷ್ಫಲವಾಗುತ್ತದೆ. ನಿಷ್ಠಾವಂತರಿಗೆ ಸಮಾಜದಲ್ಲಿ ಬೆಲೆ ಇದೆ,ಅವರನ್ನು ಎಲ್ಲರೂ ನಂಬುತ್ತಾರೆ. ಅಂತವರು ಎಲ್ಲಿದ್ದರೂ (ಕಾಡಿನಲ್ಲಿದ್ದರೂ) ಭಯವಿಲ್ಲ,ನಿಷ್ಠೆ ಇರದ ವ್ಯಕ್ತಿ ಎಲ್ಲರ ಮಧ್ಯೆ ,ಎಲ್ಲಿ ಇದ್ದರೂ ಭಯ,ದುಗುಡ ಕಾಣಿಸುತ್ತದೆ ಎಂದು ದಾಸಿಮಯ್ಯರು ನಿಷ್ಠೆಯ ಬಗ್ಗೆ ಹೇಳಿದ್ದಾರೆ.)

**ಪೂರಕ ವಚನ**

ಹರಿದ ಗೋಣಿಯಲೊಬ್ಬ ಕಳವೆಯ ತುಂಬಿದ
ಇರುಳೆಲ್ಲ ನಡೆದನಾ ಸುಂಕಕ್ಕಂಜಿ
ಕಳವೆಯೆಲ್ಲಾ ಹೋಗಿ ಬರಿಯ ಗೋಣಿ ಉಳಿದಿತ್ತು
ಅಳಿದಮನ ಭಕ್ತಿಯಿಂತಾಯಿತ್ತು ರಾಮನಾಥ



## ಕವಿ ಪರಿಚಯ

**ಬಸವಣ್ಣನವರು** ಪ್ರಸಿದ್ಧ ವಚನಕಾರರು ಮತ್ತು ಸಮಾಜ ಸುಧಾರಕರು. ಬಸವಣ್ಣನವರು ಕ್ರಿ.ಶ.ಸು.12ನೇಶತಮಾನಲ್ಲಿ ಬಿಜಾಪುರ ಜಿಲ್ಲೆಯ ಬಾಗೇವಾಡಿಯಲ್ಲಿ ಜನಿಸಿದರು. ಕಳಚುರಿ ವಂಶದ ಬಿಜ್ಜಳನ ಆಸ್ಥಾನದಲ್ಲಿ ಭಂಡಾರಿಯಾಗಿ,ರಾಜ್ಯದ ಮಹಾಭಂಡಾರಿಯಾಗಿ ಸೇವೆಸಲ್ಲಿಸಿದ್ದಾರೆ. **'ಕೂಡಲ ಸಂಗಮದೇವಾ'** ಅಂಕಿತದಿಂದ ರಚಿಸಿರುವ ಇವರ ಸಾವಿರಾರು ವಚನಗಳು ದೊರೆತಿವೆ. ಸರಳವಾದ ಭಾವಗೀತಾತ್ಮಕ ವಚನಗಳಲ್ಲಿ ಸಾಮಾಜಿಕ, ನೈತಿಕ ವಿಚಾರಧಾರೆಗಳನ್ನು ಸಾದರಪಡಿಸಲಾಗಿದೆ.

ಬಸವಣ್ಣನವರು ನೈತಿಕ ಬದುಕಿಗೆ ಹೆಚ್ಚಿನ ಮಹತ್ವ ನೀಡಿದರು. ಸಮಾನತೆ, ಸರ್ವೋದಯ ಮತ್ತುಸ್ವಾತಂತ್ರ್ಯ ಸೌಹಾರ್ದತೆಗಳ ಅಡಿಗಲ್ಲಿನ ಮೇಲೆ ಸಮಾಜವನ್ನು ಕಟ್ಟಲು ಪ್ರಯತ್ನಿಸಿದರು. ಚಂಚಲವಾದ ಮನಸ್ಸನ್ನು ಸತ್ಕಾರ್ಯದಿಂದ ದೃಢವಾಗಿಸಿಕೊಂಡು ಅಜ್ಞಾನ, ಮೌಢ್ಯ, ಶೋಷಣೆಗಳಿಂದ ಮುಕ್ತವಾಗಬೇಕು.ಮನಸ್ಸಿನಲ್ಲಿ ಅರಿಷಡ್ವರ್ಗಗಳೆಂಬ ಕೊಳಕು ತುಂಬಿದ್ದರೆ ಬಹಿರಂಗ ಶುದ್ಧಿಯಿಂದ ಪ್ರಯೋಜನವಿಲ್ಲ. ನಡೆ–ನುಡಿ ಒಂದಾಗಿದ್ದಾಗ ಮಾತ್ರ ದೇವರು ಒಲಿಯುತ್ತಾನೆ. ನಮ್ಮ ಮಾತು ಶುದ್ಧ, ಸ್ಪಷ್ಟ; ಮಿಗಿಲಾಗಿ ಅರ್ಥಪೂರ್ಣವಾಗಿದ್ದು, ಅದರಂತೆ ನಡೆದಾಗ ಮಾತ್ರ ಸುಖೀಸಮಾಜ ನಿರ್ಮಾಣವಾಗಬಲ್ಲದು ಎಂಬುದು ಇಲ್ಲಿಯ ವಚನಗಳ ಆಶಯವಾಗಿದೆ.

ವಚನಸೌರಭದ **ಬಸವಣ್ಣನವರ ವಚನ**ಗಳನ್ನು **ಸಂ.ಶಿ.ಭೂಸನೂರುಮಠ** ಅವರು ಸಂಪಾದಿಸಿರುವ **ವಚನಸಾಹಿತ್ಯಸಂಗ್ರಹ** ಗ್ರಂಥದಿಂದ ಆಯ್ಕೆಮಾಡಲಾಗಿದೆ.

* * * * *



**ಮರನನೇರಿದ ಮರ್ಕಟನಂತೆ**
**ಹಲವು ಕೊಂಬೆಗೆ ಹಾಯುತಲಿದೆ**
**ಬೆಂದಮನವ ನಾನೆಂತು ನಂಬುವೆನಯ್ಯಾ?**
**ಎಂತು ನಚ್ಚುವೆನಯ್ಯಾ?**
**ಎನ್ನ ತಂದೆ ಕೂಡಲಸಂಗಮ ದೇವನಲ್ಲಿಗೆ ಹೋಗಲೀಯದಯ್ಯಾ ॥1॥**

ಮರ್ಕಟ–ಕೋತಿ; ನಚ್ಚು–ನಂಬು

## ಸಾರಾಂಶ

ಮನಸ್ಸು ಮರವನ್ನು ಏರಿದ ಕೋತಿಯಂತೆ ಅತ್ತ–ಇತ್ತ ಕೊಂಬೆಯಿಂದ ಕೊಂಬೆಗೆ ಹಾರುತ್ತಿದೆ. ನಾನಾ ವಿಷಯಸುಖದ ಕಡೆ ಹಾರುವ ಈ ಮನಸ್ಸನ್ನು ನಾನು ಹೇಗೆ ನಂಬಬೇಕು , ಎಷ್ಟು ನಂಬಬೇಕು ಎನ್ನ ತಂದೆ ಕೂಡಲ ಸಂಗಮದೇವ ನಿನ್ನ ಧ್ಯಾನದ ಕಡೆಗೆ ಹೋಗಲು ಬಿಡುತ್ತಿಲ್ಲ.

## ಭಾವಾರ್ಥ

ಬಸವಣ್ಣನವರು ಈ ವಚನದಲ್ಲಿ ಮನಸ್ಸಿನ ಚಂಚಲತೆಯ ಬಗ್ಗೆ ಹೇಳಿದ್ದಾರೆ. ಮನಸ್ಸು ಮಂಗನಂತೆ ಒಂದು ವಿಷಯದಿಂದ ಮತ್ತೊಂದು ವಿಷಯದ ಕಡೆಗೆ ಹಾರಿ ಹೋಗುತ್ತಿದೆ. ಈ ಮನಸ್ಸಿಗೆ ಸ್ಥಿರತೆಯೆನ್ನುವುದು ಇಲ್ಲ. ಇಂತಹ ಮನಸ್ಸನ್ನು ನಂಬಿ ನಿಮ್ಮ ಧ್ಯಾನದಲ್ಲಿ ಹೇಗೆ ತೊಡಗಿಕೊಳ್ಳಲಿ .ಆದ್ದರಿಂದ ಈ ಮನಸ್ಸಿಗೆ ಸ್ಥಿರತೆಯನ್ನು ಕೊಟ್ಟು ನಿಮ್ಮ ಧ್ಯಾನದಲ್ಲಿ ತೊಡಗುವಂತೆ ಮಾಡು ತಂದೆ ಎಂದು ಭಗವಂತನಿಗೆ ತಮ್ಮ ಚಂಚಲ ಮನಸ್ಸಿನ ಬಗ್ಗೆ ಹೇಳಿದ್ದಾರೆ. ಅದೇ ರೀತಿಯಾಗಿ ನಮ್ಮ ಮನಸ್ಸುಗಳು ಕೂಡ ಚಂಚಲವಾಗಿರುತ್ತದೆ. ಅದನ್ನು ನಿಯಂತ್ರಿಸಿಕೊಂಡು ಕಾರ್ಯದಲ್ಲಿ ಮಗ್ನನಾಬೇಕೆಂದು ತಿಳಿಯಬೇಕು.

**ಅಂದಣವನೇರಿದ ಸೊಣಗನಂತೆ–**
**ಕಂಡೊಡೆ ಬಿಡದು ಮುನ್ನಿನ ಸ್ವಭಾವವನು;**
**ಸುಡು! ಸುಡು!! ಮನವಿದು ವಿಷಯಕ್ಕೆ ಹರಿವುದು;**
**ಮೃಡ, ನಿಮ್ಮನನುದಿನ ನೆನೆಯಲೀಯದು**
**ಎನ್ನೊಡೆಯ ಕೂಡಲ ಸಂಗಮದೇವಾ**
**ನಿಮ್ಮ ಚರಣವ ನೆನೆವಂತೆ ಕರುಣಿಸು**
**ಸೆಱಗೊಡ್ಡಿ ಬೇಡುವೆ, ನಿಮ್ಮಧರ್ಮ.॥2॥**



| |
|---|
| ಅಂದಣ–ಪಲ್ಲಕ್ಕಿ(ಮೇಣೆ); ಸೊಣಗ(ದ್ಭ)–ಶುನಕ(ತ್ಸ)(ನಾಯಿ); ಮೃಡ–ಶಿವ |

## ಸಾರಾಂಶ

ಪಲ್ಲಕ್ಕಿಯನ್ನು ಏರಿದ ನಾಯಿ ಮಾಂಸ(ಹೊಲಸು)ವನ್ನು ಕಂಡ ತಕ್ಷಣ ತನ್ನ ಹಿಂದಿನ ಗುಣವನ್ನು ಬಿಡದೆ ಜಿಗಿದು ಬರುವುದು. ಹಾಗೆಯೇ ಚಂಚಲವಾದ ಮನಸ್ಸು ವಿಷಯಸುಖದ ಕಡೆಗೆ ಆಸೆ ಪಡುವುದು .ಶಿವನೆ ಈ ಚಂಚಲ ಮನಸ್ಸು ಪ್ರತಿದಿನವು ನಿಮ್ಮನ್ನು ನೆನೆಯಲು ಬಿಡಿತ್ತಿಲ್ಲ. ಎನ್ನ ಒಡೆಯ ಕೂಡಲ ಸಂಗಮದೇವ ನಿಮ್ಮ ಪಾದಸ್ಮರಣೆ ಮಾಡುವಂತೆ ಕರುಣೆ ತೋರಿಸು ಸೆರಗೊಡ್ಡಿ ಬೇಡಿಕೊಳ್ಳುತ್ತೇನೆ.

## ಭಾವಾರ್ಥ

**'ಹುಟ್ಟು ಗುಣ ಸುಟ್ಟರು ಹೋಗದು'** ಎಂಬ ಗಾದೆಯಂತೆ ಕೆಲವರ ಕೆಟ್ಟ ಯೋಚನೆಗಳು,ಕೆಟ್ಟ ಕೆಲಸಗಳನ್ನು ಮಾಡುವುದನ್ನು ಬಿಡುವುದಿಲ್ಲ. ನಾಯಿಯನ್ನು ಪಲ್ಲಕ್ಕಿ ಮೇಲೆ ಕೂಡಿಸಿ ಮೆರವಣಿಗೆ ಮಾಡಿದರೂ ಹೊಲಸು ಕಂಡ ತಕ್ಷಣ ಅದನ್ನು ತಿನ್ನಲು ಹೋಗುತ್ತದೆ. ಅದೇ ರೀತಿ ಚಂಚಲವಾದ ಈ ಮನಸ್ಸು ಸುಖದ (ಹೆಣ್ಣು ,ಹೊನ್ನು ,ಮಣ್ಣು, ಕಾಮ, ಕ್ರೋಧ, ಲೋಭ, ಮೋಹ, ಮದ,ಮತ್ಸರಗಳೆಂಬ ಅರಿಷಡ್ವರ್ಗಗಳ ) ಆಸೆಯ ಬೆನ್ನು ಹತ್ತಿ ನಿಮ್ಮನ್ನು (ಭಗವಂತ) ನೆನೆಯಲು ಬಿಡುತ್ತಿಲ್ಲ. ನಿಮ್ಮಲ್ಲಿ ಸೆರಗೊಡ್ಡಿ ಬೇಡಿಕೊಳ್ಳುತ್ತೇನೆ ನನ್ನ ಮನಸ್ಸನ್ನು ನಿಮ್ಮನ್ನು ಪ್ರತಿಕ್ಷಣವು ನೆನೆಯುವಂತೆ ಮಾಡು ಎಂದು ಎಂದು ಅಭಿವ್ಯಕ್ತಪಡಿಸಿದ್ದಾರೆ. ಅದೇ ರೀತಿಯಾಗಿ ನಾವು ಯಾವುದೇ ಸುಖದ ಬೆನ್ನು ಹತ್ತಿಹೋಗದೇ ಒಳ್ಳೆಯ ಕಾರ್ಯಗಳಲ್ಲಿ ತೊಡಗಿಕೊಳ್ಳಬೇಕೆಂದು ತಿಳಿದುಕೊಳ್ಳಬೇಕು.

**ಮನೆಯೊಳಗೆ ಮನೆಯೊಡೆಯನಿದ್ದಾನೊ ಇಲ್ಲವೊ?**
**ಹೊಸ್ತಿಲಲ್ಲಿ ಹುಲ್ಲು ಹುಟ್ಟಿ, ಮನೆಯೊಳಗೆ ರಜ ತುಂಬಿ,**
**ಮನೆಯೊಳಗೆ ಮನೆಯೊಡೆಯನಿದ್ದಾನೊ ಇಲ್ಲವೊ?**
**ತನುವಿನೊಳಗೆ ಹುಸಿ ತುಂಬಿ, ಮನದೊಳಗೆ ವಿಷಯ ತುಂಬಿ**
**ಮನೆಯೊಳಗೆ ಮನೆಯೊಡೆಯನಿಲ್ಲಾ**
**ಕೂಡಲಸಂಗಮದೇವಾ ॥3॥**

| |
|---|
| ರಜ–ದೂಳು; ಹುಸಿ–ಸುಳ್ಳು; ವಿಷಯ–ಕಾಮನೆ. |

## ಸಾರಾಂಶ

ಮನೆಯೊಳಗೆ ಮನೆಯ ಯಜಮಾನ ಇರುವನೋ ಇಲ್ಲವೋ ಬಾಗಿಲಲ್ಲಿ ಹುಲ್ಲು ಹುಟ್ಟಿದೆ, ಮನೆತುಂಬ ದೂಳು ತುಂಬಿದೆ. ಮನೆಯೊಳಗೆ ಮನೆಯ ಯಜಮಾನ ಇದ್ದಾನೋ ಇಲ್ಲವೋ ಅದೇ ರೀತಿ ಈ ದೇಹವೆಂಬ ಮನೆಯೊಳಗೆ ಬರೀ ಸುಳ್ಳುಗಳೇ ತುಂಬಿಹೋಗಿವೆ,ವಿಷಯಕಾಮನೆಗಳೇ ತುಂಬಿಕೊಂಡಿವೆ, ಮನೆಯೊಳಗೆ ಮನೆಯ ಯಜಮಾನ ಇರುವನೋ ಇಲ್ಲವೋ ಕೂಡಲ ಸಂಗಮದೇವ ಎಂದು ಬಸವಣ್ಣನವರು ಮನೆ ಮತ್ತು ಮನಗಳ ಕೊಳಕುಗಳ ಬಗ್ಗೆ ಹೇಳಿದ್ದಾರೆ.

## ಭಾವಾರ್ಥ

ಅಪರೂಪಕ್ಕೆ ಗೆಳೆಯನೊಬ್ಬನ ಮನೆಗೆ ಹೋದಾಗ ಆ ಮನೆಯ ಕೆಲವು ಲಕ್ಷಣಗಳನ್ನು ನೋಡಿಯೇ ಮನೆಯಲ್ಲಿ ಯಾರು ಇಲ್ಲವೆಂದು ಹೇಳಬಹುದು. ಬಾಗಿಲಲ್ಲಿ ಹುಲ್ಲು ಹುಟ್ಟಿರುವುದು, ಮನೆತುಂಬ ದೂಳು ತುಂಬಿರುದು ನೋಡಿದಾಗ ಗೊತ್ತಾಗುತ್ತದೆ. ಅದೇ ರೀತಿ ನಮ್ಮ ಶರೀರದ ಸ್ಥಿತಿಯೂ ಹಾಗೇಯೆ. ಬರೀ ಸುಳ್ಳು, ವಂಚನೆ ,ಮೋಸ, ಹೆಣ್ಣು ,ಹೊನ್ನು ,ಮಣ್ಣುಗಳ ಆಸೆಯಲ್ಲಿ ಮತ್ತು ಕಾಮ, ಕ್ರೋಧ, ಲೋಭ, ಮೋಹ, ಮದ, ಮತ್ಸರಗಳೆಂಬ ಅರಿಷಡ್ವರ್ಗಗಳ ಮನೆಯಾಗಿರುವ , ಕೆಟ್ಟ ಗುಣಗಳಿಂದ ಆವರಿಸಿರುವ ಈ ದೇಹ ಮತ್ತು ಮನಸ್ಸಿನಲ್ಲಿ ಒಳ್ಳೆಯ ಯೋಚನೆಗಳು,ಚಿಂತನೆಗಳು ಹೇಗೆ ಇರಲು ಸಾಧ್ಯ. ಆದ್ದರಿಂದ ನಮ್ಮ ದೇಹ ಮತ್ತು ಮನಸ್ಸಿನಿಂದ ಅರಿಷಡ್ವರ್ಗಗಳು ಮತ್ತು ಇತ್ಯಾದಿ ಅವಗುಣಗಳಿಂದ ದೂರವಿರಬೇಕು . ಪಾಳುಬಿದ್ದ ಮನೆಯಲ್ಲಿ ದುಷ್ಟಶಕ್ತಿಗಳು ಬೀಡು ಬಿಡುವಂತೆ,ಸದ್ಗುಣಗಳಿಲ್ಲದ ವ್ಯಕ್ತಿಯ ಶರೀರದಲ್ಲಿ ಅನಿಷ್ಟಕಾರಕ ಶಕ್ತಿಗಳು ತುಂಬುತ್ತವೆ. ಹಾಗಾಗಿ ಒಳ್ಳೆಯ ಚಿಂತನೆಗಳು, ಯೋಚನೆಗಳು, ಒಳ್ಳೆಯ ಮನಸ್ಸುಗಳು ನಮ್ಮದಾಗಬೇಕು ಎಂದು ಮನಸ್ಸಿನ ಶುದ್ಧೀಕರಣದ ಬಗ್ಗೆ ಬಸವಣ್ಣನವರು ಹೇಳಿದ್ದಾರೆ.

**ನುಡಿದರೆ ಮುತ್ತಿನ ಹಾರದಂತಿರಬೇಕು**
**ನುಡಿದರೆ ಮಾಣಿಕ್ಯದ ದೀಪ್ತಿಯಂತಿರಬೇಕು**
**ನುಡಿದರೆ ಸ್ಫಟಿಕದ ಶಲಾಕೆಯಂತಿರಬೇಕು**
**ನುಡಿದರೆ ಲಿಂಗ ಮೆಚ್ಚಿ ಅಹುದಹುದೆನಬೇಕು**
**ನುಡಿಯೊಳಗಾಗಿ ನಡೆಯದಿದ್ದರೆ**
**ಕೂಡಲಸಂಗಮದೇವನೆಂತೊಲಿವನಯ್ಯ ?॥4॥**

## ಸಾರಾಂಶ

ಮಾತು ಆಡಿದರೆ ಮುತ್ತಿನ ಹಾರ ಪೋಣಿಸಿ ದಂತಿರಬೇಕು. ಮಾತನಾಡಿದರೆ ಮಾಣಿಕ್ಯ ಹೊರಸೂಸುವ ಬೆಳಕಿನಂತಿರಬೇಕು, ಮಾತು ಸ್ಪಟಿಕ ಮಣಿಯ ಹೊರಸೂಸುವ ನೇರವಾದ ಕಿರಣದಂತಿರಬೇಕು, ಮಾತನಾಡಿದರೆ ದೇವರೇ ಮೆಚ್ಚಿ ಹೌದು ಇದು ಒಳ್ಳೆಯ ಮಾತು ಎನ್ನಬೇಕು. ಮಾತನಾಡಿದಂತೆ ನಡೆದುಕೊಳ್ಳಬೇಕು, ಮಾತು ಆಡಿದಂತೆ ನಡೆಯದಿದ್ದರೆ ಕೂಡಲಸಂಗಮದೇವ ಒಲಿಯುವುದಿಲ್ಲ ಎಂದು ಬಸವಣ್ಣನವರು ಮಾತು ಹೇಗಿರಬೇಕು ಎಂದು ಹೇಳಿದ್ದಾರೆ.

## ಭಾವಾರ್ಥ

**'ಮಾತು ಮನೆ ಕೆಡಿಸಿತು ತೂತು ಒಲೆ ಕೆಡಿಸಿತು' ,'ಮಾತೇ ಮುತ್ತು;ಮಾತೇ ಮೃತ್ಯು , 'ಮಾತು ಆಡಿದರ ಹೋಯಿತು ; ಮುತ್ತು ಹೊಡೆದರೆ ಹೊಯಿತು' 'ಮಾತುಬಲ್ಲವ ಮಾಣಿಕ್ಯತಂದ ; ಮಾತರಿಯದವ ಜಗಳ ತಂದ'** ಎಂಬ ಗಾದೆ ಮಾತುಗಳನ್ನು ಕೇಳಿದರೆ ಗೊತ್ತಾಗುತ್ತದೆ ಮಾತು ಹೇಗಿರಬೇಕೆಂದು. ಪಂಪ ಹೇಳುವಂತೆ ಮಾತು ಹಿತಮಿತ ಮೃದು ವಾಗಿರಬೇಕು. ಡಿ,ವಿ,ಜಿ,ಯವರು ಹೇಳುವಂತೆ 'ಹಿತವಿರಲಿ ವಚನದಲಿ' ಆದುದರಿಂದ ನಾವಾಡುವ ಮಾತು ಸಂದರ್ಭಕ್ಕೆ ತಕ್ಕಂತೆ ,ಎಲ್ಲರಿಗೂ ಹಿತವಾಗುವಂತೆ, ಮುತ್ತಿನ ಸರದಂತೆ, ಸ್ಪಟಿಕದಂತೆ ಪಾರದರ್ಶಕವಾಗಿರಬೇಕು,ಶುದ್ಧವಾಗಿರಬೇಕು. ಒಪ್ಪ ಓರಣಗಳಿಂದ ಕೂಡಿರಬೇಕು, ಮಾತು ಮಾಣಿಕ್ಯದಂತೆ ಸ್ವಯಂಪ್ರಕಾಶವಾಗಿದ್ದು ಮತ್ತೊಬ್ಬರ ಮನದ ಕತ್ತಲೆಯನ್ನು ಓಡಿಸುವಂತಿರಬೇಕು, ಹೃದಯ ಮುಟ್ಟುವಂತಿರಬೇಕು . ಒಟ್ಟಿನಲ್ಲಿ ಆ ದೇವರೇ ಮೆಚ್ಚುವಂತೆ ಇದ್ದು ನುಡಿದಂತೆ ನಡೆಯಬೇಕು. ಅಂದರೆ ಮಾತಿನಂತೆ ನಮ್ಮ ನಡೆ ಇರಬೇಕು. ಮಾತುಕೊಟ್ಟು ಮರೆಯಬಾರದು. ಮರೆತರೆ ದೇವರು ಒಲಿಯುವುದಿಲ್ಲ ಎಂದು ಬಸವಣ್ಣನವರು ಮಾತಿನ ಮಹತ್ವವನ್ನು ಹೇಳಿದ್ದಾರೆ.

## ಪದ್ಯಪಾಠ – 5
# ಸಂಕಲ್ಪ ಗೀತೆ

**– ಡಾ. ಜಿ. ಎಸ್. ಶಿವರುದ್ರಪ್ಪ**

"ಹಿಂದೆ ಗುರುವಿದ್ದ, ಮುಂದೆ ಗುರಿಯಿತ್ತು, ಸಾಗುತ್ತಿತ್ತು ಧೀರರ ದಂಡು" ಎಂಬ ವಾಕ್ಯ ಹಿಂದಿನ ತಲೆಮಾರಿನ ಯುವಕರಿಗಿದ್ದ ನೆಲೆಯನ್ನು ತಿಳಿಸುತ್ತಿದೆ. ಹೋಗಬೇಕಾದ ದಾರಿ ತಲುಪಬೇಕಾದ ಗುರಿ ಸ್ಪಷ್ಟವಾಗಿದ್ದರೆ ಅರ್ಧ ಯಶಸ್ಸನ್ನು ಪಡೆದಂತೆ. 'ಸ್ವಾತಂತ್ರ್ಯ ನನ್ನ ಆಜನ್ಮಸಿದ್ಧ ಹಕ್ಕು' ಎಂದ ತಿಲಕರು, ಸ್ವಾತಂತ್ರ್ಯಗಳಿಸುವುದೇ ಜೀವನದ ಏಕೈಕ ಸಂಕಲ್ಪ ಎಂದುಕೊಂಡ ರಾಷ್ಟ್ರಪಿತ ಗಾಂಧೀಜಿ ಸಾಧಕರೆನಿಸಿಕೊಂಡರು. ಇತಿಹಾಸ ದಾಖಲಿಸುವುದು, ನೆನಪಿಸುವುದು ಇಂತಹ ಸಾಧಕರನ್ನು. ಸಾಧಕನು ತಾನು ಕಂಡ ಕನಸನ್ನು ಅದೆಷ್ಟೇ ತೊಡಕುಗಳು ಬಂದರೂ ಅಡ್ಡಿಆತಂಕಗಳು ಎದುರಾದರೂ ನನಸಾಗಿಸುತ್ತಾನೆ. ಹೀಗೆ ಸಂಕಲ್ಪದತ್ತ ದೃಢನಿರ್ಧಾರದಿಂದ ಕಾರ್ಯಶೀಲರಾದರೆ "ಅಸಾಧ್ಯವಾದುದು ಯಾವುದೂ ಇಲ್ಲ."ದೃಢ ಸಂಕಲ್ಪದಿಂದ ಏನೇನನ್ನು ಸಾಧಿಸಬಹುದೆಂಬುದನ್ನು ರಾಷ್ಟ್ರಕವಿ ಜಿ.ಎಸ್. ಶಿವರುದ್ರಪ್ಪನವರು **'ಸಂಕಲ್ಪ ಗೀತೆ'** ಎಂಬ ಭಾವಗೀತೆಯಲ್ಲಿ ಸರಳವಾಗಿ, ಸುಂದರವಾಗಿ ಅಭಿವ್ಯಕ್ತಿಸಿದ್ದಾರೆ.

| | |
|---|---|
|  | **ಕವಿಪರಿಚಯ**<br>ಜಿ.ಎಸ್.ಶಿವರುದ್ರಪ್ಪ ಎಂದೇ ಪ್ರಸಿದ್ಧ ರಾಗಿರುವ ಗುಗ್ಗರಿ ಶಾಂತವೀರಪ್ಪ ಶಿವರುದ್ರಪ್ಪ ನವರು ಕ್ರಿ.ಶ.1926 ರಲ್ಲಿ ಶಿವಮೊಗ್ಗ ಜಿಲ್ಲೆಯ ಶಿಕಾರಿಪುರದಲ್ಲಿ ಜನಿಸಿದರು. ಆಧುನಿಕ ಕನ್ನಡದ ಪ್ರಮುಖ ಕವಿಗಳಲ್ಲಿ ಒಬ್ಬರಾದ ಶಿವರುದ್ರಪ್ಪನವರು **ಸಾಮಗಾನ**, **ಚೆಲುವು-ಒಲವು**, **ದೇವಶಿಲ್ಪ**, **ದೀಪದಹೆಜ್ಜೆ**, **ಅನಾವರಣ**. **ವಿಮರ್ಶೆಯ ಪೂರ್ವಪಶ್ಚಿಮ**, **ಮಾಸ್ಕೊದಲ್ಲಿ ಇಪ್ಪತ್ತೆರಡು ದಿನಗಳು**, **ಸೌಂದರ್ಯ ಸಮೀಕ್ಷೆ** ಮೊದಲಾದ ಕೃತಿಗಳನ್ನು ರಚಿಸಿದ್ದಾರೆ. **ಕಾವ್ಯಾರ್ಥಚಿಂತನ** ಕೃತಿಗೆ ಕೇಂದ್ರಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪಡೆದಿರುವ ಶಿವರುದ್ರಪ್ಪ ಅವರು ಹಂಪಿ ಕನ್ನಡ ವಿಶ್ವವಿದ್ಯಾನಿಲಯದ **ನಾಡೋಜ** ಪುರಸ್ಕಾರಕ್ಕೆ ಭಾಜನರಾಗಿದ್ದಾರೆ. **ರಾಷ್ಟ್ರಕವಿ** ಅಭಿಧಾನ ಮತ್ತು **ಪಂಪಪ್ರಶಸ್ತಿಗೆ** ಪಾತ್ರರಾಗಿದ್ದಾರೆ. |

ಜೀವನದಲ್ಲಿ ಧನಾತ್ಮಕ ಭಾವನೆಯನ್ನು, ,ಧೃಢಸಂಕಲ್ಪವನ್ನು ಹೊಂದಿರಬೇಕು. ಯಾವುದೇ ರೀತಿಯ ಸವಾಲುಗಳು ಎದುರಾದಾಗಲೂ ಆತ್ಮವಿಶ್ವಾಸದ ಸಂಕಲ್ಪ ನಿಷ್ಠೆಯಿಂದ ಕ್ರಿಯಾಶೀಲರಾದಾಗ ಯಶಸ್ಸು ಲಭಿಸುತ್ತದೆ. ಭೇದಭಾವಗಳನ್ನು ಹೋಗಲಾಡಿಸಿ ಐಕ್ಯದಿಂದ ಪ್ರಯತ್ನಶೀಲರಾದಾಗ ಬಲ ವರ್ಧಿಸುತ್ತದೆ. ಭಯ ಮತ್ತುಅನುಮಾನ ಆವರಿಸಿರುವ ಸಮಾಜವನ್ನು ದೃಢನಿಷ್ಠೆಯಿಂದ ಸ್ವಾಸ್ಥ್ಯದ ನೆಲೆಯಾಗಿಸುವ ಹಣತೆ ಹಚ್ಚಿದಾಗ ಕತ್ತಲೆ ದೂರವಾಗುತ್ತದೆ ಎಂಬುದು ಜಿ.ಎಸ್.ಶಿವರುದ್ರಪ್ಪನವರ ಆಶಯವಾಗಿದೆ.

ಜಿ.ಎಸ್. ಶಿವರುದ್ರಪ್ಪ ವಿರಚಿತ **'ಎದೆತುಂಬಿಹಾಡಿದೆನು'** ಕವನ ಸಂಕಲನದಿಂದ **'ಸಂಕಲ್ಪಗೀತೆ'** ಕವಿತೆಯನ್ನು ಆಯ್ಕೆ ಮಾಡಿಕೊಳ್ಳಲಾಗಿದೆ.



**ಸುತ್ತಲು ಕವಿಯುವ ಕತ್ತಲೆಯೊಳಗೆ**

**ಪ್ರೀತಿಯ ಹಣತೆಯ ಹಚ್ಚೋಣ**

**ಬಿರುಗಾಳಿಗೆ ಹೊಯ್ದಾಡುವ ಹಡಗನು**

**ಎಚ್ಚರದಲಿ ಮುನ್ನಡೆಸೋಣ**



| |
|---|
| ಹಣತೆ–ದೀಪ, ಹಡಗು–ನಾವೆ |

## ಭಾವಾರ್ಥ ಸಹಿತ ಸಾರಾಂಶ

ಈ ಪದ್ಯದಲ್ಲಿ ಎರಡು ಮುಖ್ಯ ತತ್ವಗಳನ್ನು ನೋಡಬಹುದು ಅವುಗಳೆಂದರೆ
1) ಬೆಳಕಿನ ತತ್ವ 2) ಪ್ರೀತಿಯ ತತ್ವ .

" ಸುತ್ತಲು ಕವಿಯುವ ಕತ್ತಲೆಯೊಳಗೆ ಪ್ರೀತಿಯ ಹಣತೆಯ ಹಚ್ಚೋಣ " ಅಂದರೆ ಇಲ್ಲಿ ಜಾತೀಯತೆ, ಮತ, ಭಾಷೆ, ಬಣ್ಣ, ಅಜ್ಞಾನ, ಮೂಢನಂಬಿಕೆಗಳೆಂಬ ಕತ್ತಲೆಯು ನಮ್ಮ ಸುತ್ತಲೂ ಕವಿದಿರುತ್ತದೆ, ಆದುದರಿಂದ ಆ ಕತ್ತಲೆಯನ್ನು ಓಡಿಸಲು ಬೆಳಕಿನ (ಅರಿವಿನ) ಅವಶ್ಯಕತೆಯಿದೆ. ಬೆಳಕನ್ನು ಬೀರಲು ಪ್ರೀತಿಯಿಂದ ಹಣತೆಯನ್ನು ಹಚ್ಚಬೇಕಾಗಿದೆ ಎಂದು ಮೊದಲನೆಯ ಬೆಳಕಿನ ತತ್ವವನ್ನು ಸ್ಪಷ್ಟಪಡಿಸಬಹುದು.. ಅಂತಹ ಹಣತೆಯನ್ನು ಹಚ್ಚಿ "ಬಿರುಗಾಳಿಗೆ ಸಿಕ್ಕು ಹೊಯ್ದಾಡುವಂತಹ ಹಡಗನ್ನು ಎಚ್ಚರಿಕೆಯಿಂದ ಮುಂದೆ ನಡೆಸಿ, ದಡವನ್ನು ಸೇರಿಸೋಣ." ಅಂದರೆ ಸಂಸಾರ ಸಾಗರದಲ್ಲಿ ಅಜ್ಞಾನದ ಬಿರುಗಾಳಿಗೆ ಹೊಯ್ದಾಡುತ್ತಾ ಎತ್ತೆತ್ತಲೂ ಸಾಗುತ್ತಿರುವ ಬಾಳನೌಕೆಯನ್ನು ಎಚ್ಚರಿಕೆಯಿಂದ ಗುರಿಯತ್ತ ನಡೆಸೋಣ ಎಂದು ತಮ್ಮ ಎರಡನೆಯ ಪ್ರೀತಿ ತತ್ವವನ್ನು ಪ್ರತಿಪಾದಿಸಬಹುದು.

**ಕಲುಷಿತವಾದೀ ನದೀ ಜಲಗಳಿಗೆ**

**ಮುಂಗಾರಿನ ಮಳೆಯಾಗೋಣ**

**ಬರಡಾಗಿರವೀ ಕಾಡು ಮೇಡುಗಳ**

**ವಸಂತವಾಗುತ ಮುಟ್ಟೋಣ**

| |
|---|
| ಕಲುಷಿತ–ಮಲಿನ, ಬರಡು – ಪೊಳ್ಳು, ಹಾಳು ಬಿದ್ದಿರುವ |

## ಭಾವಾರ್ಥ ಸಹಿತ ಸಾರಾಂಶ

ಆಧುನಿಕ ಮಾನವನ ಹಸ್ತಕ್ಷೇಪದಿಂದ ಕಲುಷಿತವಾದ ನದಿಗಳ ಶುದ್ಧಿಕರಣ ಮಾಡಲು ಭೋರ್ಗರೆಯುವ ಮುಂಗಾರಿನ ಮಳೆಯೇ ಬೇಕು. ಅಂದರೆ ಅಲ್ಲಲ್ಲಿ ನಿಂತ ಕಲುಷಿತ ನೀರು, ಕೊಚ್ಚೆಗಳನ್ನು ಕೊಚ್ಚಿ ತೆಗೆದು ಶುದ್ಧೀಕರಿಸಬಹುದು. ಹಾಗೆಯೇ ಕಲ್ಮಷಗಳಿಂದ ಕೂಡಿದ ಮನುಷ್ಯರ ಮನಸ್ಸುಗಳನ್ನು ಪ್ರೀತಿಯ. ಮೂಲಕ ಹಸನಗೊಳಿಸೋಣ. ' ಬರಡಾಗಿರವಿ ಕಾಡು ಮೇಡುಗಳ ವಸಂತವಾಗುತ ಮುಟ್ಟೋಣ ಅಂದರೆ ಆಧುನೀಕರಣ ,ಜಾಗತೀಕರಣ,ಕೈಗಾರೀಕರಣ, ಡಾಂಬರೀಕರಣ,ಯಾಂತ್ರೀಕರಣಗಳಿಂದಾಗಿ ಕಾಡುಗಳು ನಾಶವಾಗಿ ಪರಿಸರ ಬರಡಾದ ಮರುಭೂಮಿಯಂತಾಗಿದೆ.ಅಲ್ಲಿ ಗಿಡಮರಗಳನ್ನು ಬೆಳೆಸುತ್ತ, ಬೆಳೆಸುವ ಅವಶ್ಯಕತೆಯನ್ನು ಜನರಲ್ಲಿ ಜಾಗೃತಗೊಳಿಸುವ ಕಾರ್ಯವನ್ನು ಮಾಡೋಣ ಎನ್ನಬಹುದು. ಅಂದರೆ ನಾಗರೀಕತೆಯ ಬರಾಟೆಯಲ್ಲಿ ಮೌಲ್ಯಗಳು ಕುಸಿಯುತ್ತಿವೆ,ಅಂತಹ ಹೃದಯದಲ್ಲಿ ಮೌಲ್ಯಗಳೆಂಬ ಸಸಿಗಳನ್ನು ನೆಟ್ಟು ,ಪ್ರೀತಿಯ ನೀರನ್ನು ಎರೆಯುತ್ತ ಬದುಕನ್ನು ವಸಂತವಾಗಿಸೋಣ ಎಂದು ಬದುಕು ಹಸನುಗೊಳಿಸುವ ಮೌಲ್ಯವನ್ನು ಕವಿ ಜಿ.ಎಸ್.ಶಿವರುದ್ರಪ್ಪನವರು ಹೇಳಿದ್ದಾರೆ.



**ಬಿದ್ದುದನ್ನು ಮೇಲೆಬ್ಬಿಸಿ ನಿಲ್ಲಿಸಿ**
**ಹೊಸ ಭರವಸೆಗಳ ಕಟ್ಟೋಣ**
**ಮನುಜರ ನಡುವಣ ಅಡ್ಡಗೋಡೆಗಳ**
**ಕೆಡವುತ ಸೇತುವೆಯಾಗೋಣ**.

## ಭಾವಾರ್ಥ ಸಹಿತ ಸಾರಾಂಶ

ಬಡತನ, ಅಜ್ಞಾನ, ಮೂಢನಂಬಿಕೆ, ಧರ್ಮ, ಭಾಷೆ, ಜಾತಿಗಳಿಂದ ಶೋಷಣೆಗೊಳಗಾದ ಜನರನ್ನು ಎಲ್ಲರಂತೆ ಸಮಾನವಾಗಿ ಬದುಕಲು ಆಸರೆ ನೀಡಿ ಮೇಲೆ ತರಬೇಕು. ಅವರ ಮನಸ್ಸಿನಲ್ಲಿ ಬದುಕುವ ಹೊಸ ಭರವಸೆಗಳನ್ನು ಕೊಡಬೇಕು. ಹಾಗೆಯೇ ಮನುಷ್ಯರ ನಡುವೆ ಜಾತಿ, ಧರ್ಮ, ಭಾಷೆ, ವರ್ಣಗಳಿಂದ ಆವೃತವಾದ ಅಡ್ಡಗೋಡೆಗಳನ್ನು ಕೆಡವಿಹಾಕಬೇಕು. ವಿಶ್ವದ ಜನರೆಲ್ಲರನ್ನು ಒಂದಾಗಿಸುವ ಪ್ರೀತಿಯ, ಸ್ನೇಹದ ಸೇತುವೆಯನ್ನು ನಿರ್ಮಿಸೋಣವೆಂದು ಕವಿ ಕವಿ ಜಿ.ಎಸ್.ಶಿವರುದ್ರಪ್ಪನವರು ಸಮಾನತೆಯ ಮೌಲ್ಯವನ್ನು ಹೇಳಿದ್ದಾರೆ



**ಮತಗಳೆಲ್ಲವೂ ಪಥಗಳು ಎನ್ನುವ**

**ಹೊಸ ಎಚ್ಚರದೊಳು ಬದುಕೋಣ**

**ಭಯ ಸಂಶಯದೊಳು ಕಂದಿದ ಕಣ್ಣೊಳು**

**ನಾಳಿನ ಕನಸನು ಬಿತ್ತೋಣ.**

| |
|---|
| ಪಥ–ದಾರಿ, ವಸಂತ – ಸಮೃದ್ಧಿ; ಕಂದಿದ–ಮಸುಕಾದ |

## ಭಾವಾರ್ಥ ಸಹಿತ ಸಾರಾಂಶ


ಭಾರತದಲ್ಲಿ ವಿವಿಧ ಮತಪಂಥಗಳಿದ್ದು ಬೇರೆಬೇರೆ ರೀತಿಯ ಆಚರಣೆ, ಸಂಪ್ರದಾಯಗಳು ಇವೆ.ಆದರೂ ವಿವಿಧತೆಯಲ್ಲಿ ಏಕತೆಯನ್ನು ಕಾಣುವ ದೇಶ ಭಾರತ .ಇಂತಹ ಮತಪಂಥಗಳೆಲ್ಲವೂ ನಮ್ಮ ಉತ್ತಮ ಜೀವನಕ್ಕೆ ಬೆಳಕಾಗಬಲ್ಲ, ಮುಕ್ತಿಯನ್ನು ನೀಡಬಲ್ಲ, ಸನ್ಮಾರ್ಗಕ್ಕೆ ಕರೆದುಕೊಂಡು ಹೋಗುವ ಮಾರ್ಗಗಳೆಂದು ತಿಳಿಯಬೇಕು. ಅಸಮಾನತೆ, ಭಯೋತ್ಪಾದಕತೆ, ಶೋಷಣೆ ಇತ್ಯಾದಿಗಳಿಂದ ಭಯ–ಭೀತಿಗೊಂಡು, ನಾಳಿನ ಬದುಕಿನ ಬಗ್ಗೆ ಸಂಶಯಗೊಂಡು ನಿರಾಸೆ ಹೊಂದಿದ ಮನಸ್ಸುಗಳಿಗೆ ಮುಂದಿನ ಬದುಕಿಗೆ ಉತ್ತಮ ಕನಸನ್ನು ಅವರಲ್ಲಿ ಬಿತ್ತಿ, ಧೈರ್ಯ ನೀಡಬೇಕೆಂದು ಸಮಾನತೆಯ ತತ್ವ ಮತ್ತು ಒಳ್ಳೆ ಬದುಕಿನ ಭರವಸೆಯ ಬಗ್ಗೆ ಜಿ.ಎಸ್.ಶಿವರುದ್ರಪ್ಪನವರು ಅರಿವು ಮೂಡಿಸಿದ್ದಾರೆ.

ಪದ್ಯಪಾಠ – ೦೬

# ಕೌರವೇಂದ್ರನ ಕೊಂದೆ ನೀನು

**–ಕುಮಾರವ್ಯಾಸ**

ರಾಮಾಯಣ, ಮಹಾಭಾರತ ಮಹಾಕಾವ್ಯಗಳು ಪೂಜನೀಯ ಕೃತಿಗಳು. ಮಹಾಭಾರತವನ್ನು ವೇದವ್ಯಾಸರು ಸಂಸ್ಕೃತದಲ್ಲಿ ರಚಿಸಿದರು. ಪಂಪ, ರನ್ನ, ಕುಮಾರವ್ಯಾಸ ಮೊದಲಾದವರು ಕನ್ನಡದಲ್ಲಿ ಕಾವ್ಯ ರಚಿಸಿದರು. ಶ್ರವ್ಯ ಪರಂಪರೆಯಲ್ಲೂ ರಾಮಾಯಣ ಮಹಾಭಾರತ ಕಾವ್ಯಗಳು ಉಳಿದು ಬೆಳೆದುಬಂದಿವೆ. ಉತ್ತಮಗುಣ, ಸ್ವಭಾವಗಳನ್ನು ರೂಢಿಸಿಕೊಳ್ಳದ ವ್ಯಕ್ತಿ ಎಷ್ಟೇ ಶೌರ್ಯ, ಸಾಹಸ, ವೀರತನವನ್ನು ಪಡೆದಿದ್ದರೂ ಸ್ವತಃ ಅವನಿಗಾಗಲಿ, ಅವನ ಹಿರಿಯರಿಗಾಗಲಿ ಯಾವುದೇ ಉಪಯೋಗವಿಲ್ಲ. 'ದಾಯಾದಿಗಳ ಕಲಹ ಸರ್ವನಾಶಕ್ಕೂ ಹೇತು' ಎನ್ನುವ ಹಾಗೆ ದಾಯಾದಿಗಳೊಳಗಿನ ದ್ವೇಷ ಅಸೂಯೆಗಳು ನಮ್ಮ ಮನವನ್ನೂ ಮನೆಯನ್ನೂ ನಾಶಪಡಿಸುತ್ತವೆ ಎಂಬುದಕ್ಕೆ "ಮಹಾಭಾರತ" ಒಂದು ನಿದರ್ಶನ. ಕೃಷ್ಣ ಸಂಧಾನವು ದುರ್ಯೋಧನನ ಹಠದಿಂದ ತಿರಸ್ಕೃತವಾಗುತ್ತದೆ. ಯುದ್ಧ ಅನಿವಾರ್ಯವೆಂದಾದಾಗ ಧರ್ಮಪಕ್ಷಪಾತಿಯಾದ ಕೃಷ್ಣನು ಭೇದತಂತ್ರವನ್ನು ಬಳಸಿ ಕರ್ಣನಿಗೆ ಜನ್ಮರಹಸ್ಯವನ್ನು ತಿಳಿಸುತ್ತಾನೆ. ಸಾಮಾನ್ಯನಿಗೆ ಅತಿಯಾದ ಸಂತೋಷವನ್ನು ನೀಡಬಹುದಾದ ಸಂಗತಿ, ಅಸಾಮಾನ್ಯನೂ ಶೌರ್ಯಕ್ಕೆ, ದಾನಕ್ಕೆ, ಉದಾತ್ತತೆಗೆ, ಕರುಣೆಗೆ ಹೆಸರಾಗಿದ್ದ ಕರ್ಣನಿಗೆ ಎಂತಹ ಸಂಕಟವನ್ನು ಉಂಟುಮಾಡಿತು ; ಅವನ ಸ್ವಾಮಿನಿಷ್ಠೆಯ ಮುಂದೆ ಶ್ರೀ ಕೃಷ್ಣನೊಡ್ಡಿದ ಪ್ರಲೋಭನೆ ಹೇಗೆ ವ್ಯರ್ಥಗೊಂಡಿತೆಂಬುದನ್ನು ತಿಳಿಸುವುದು ಈ ಕಾವ್ಯಭಾಗದ ಆಶಯ.



## ಕವಿ ಪರಿಚಯ

ಕುಮಾರವ್ಯಾಸ ಎಂದೇ ಪ್ರಸಿದ್ಧನಾಗಿರುವ ಗದುಗಿನ ನಾರಾಣಪ್ಪ ಕ್ರಿ.ಶ. 1430 ರಲ್ಲಿ ಗದಗ ಪ್ರಾಂತದ ಕೋಳಿವಾಡದಲ್ಲಿ ಜನಿಸಿದನು. ವ್ಯಾಸರ ಮಹಾಭಾರತವನ್ನು ಕನ್ನಡದಲ್ಲಿ (ಮೊದಲ ಹತ್ತು ಪರ್ವ) ರಚಿಸಿದ್ದರಿಂದ ಕುಮಾರವ್ಯಾಸ ಎಂಬ ಅಭಿದಾನಕ್ಕೆ ಪಾತ್ರನಾದ. **'ಕರ್ಣಾಟಭಾರತಕಥಾಮಂಜರಿ'** ಈತನ ಪ್ರಸಿದ್ಧ ಕೃತಿ. ಇದಕ್ಕೆ **ಕನ್ನಡಭಾರತ, ಗದುಗಿನ ಭಾರತ, ಕುಮಾರವ್ಯಾಸ ಭಾರತ** ಎಂಬ ಹೆಸರಿನಿಂದಲೂ ಕರೆಯಲಾಗುತ್ತದೆ, ಈತ ಐರಾವತ ಎಂಬ ಕೃತಿಯನ್ನು ರಚಿಸಿದ್ದಾನೆಂದು ತಿಳಿದುಬಂದಿದೆ. ತನ್ನ ಕೃತಿಯಲ್ಲಿ ರೂಪಕಾಲಂಕಾರವನ್ನು ನಿರರ್ಗಳವಾಗಿ ಪ್ರಯೋಗಿಸಿ **"ರೂಪಕಸಾಮ್ರಾಜ್ಯ ಚಕ್ರವರ್ತಿ"** ಎಂಬ ಬಿರುದನ್ನು ಪಡೆದಿದ್ದಾನೆ.

**ಕುಮಾರವ್ಯಾಸ** ವಿರಚಿತ **ಕರ್ಣಾಟಭಾರತಕಥಾಮಂಜರಿ** ಕಾವ್ಯದ **ಉದ್ಯೋಗಪರ್ವದಿಂದ 'ಕೌರವೇಂದ್ರನ ಕೊಂದೆ ನೀನು'** ಕಾವ್ಯಭಾಗವನ್ನು ಆಯ್ಕೆ ಮಾಡಿಕೊಳ್ಳಲಾಗಿದೆ.

ಜೀವನದಲ್ಲಿ ಪರಸ್ಪರ ಹೊಂದಾಣಿಕೆ ಮತ್ತು ಸಾಮರಸ್ಯದ ಬದುಕು ಅಪೇಕ್ಷಣೀಯ. ಅದು ಸಾಧ್ಯವಾಗದೆ ಮತ್ಸರ, ಛಲ ಪ್ರಧಾನವಾದರೆ ಸಂಘರ್ಷ ಅನಿವಾರ್ಯವಾಗುತ್ತದೆ. ಒಬ್ಬರನ್ನೊಬ್ಬರು ನಾಶಮಾಡುವವರೆಗೂ ಅದು ಬೆಳೆಯುತ್ತದೆ. ಅದರ ಪರಿಣಾಮ ಘೋರವಾದುದು ಎಂಬ ಅರಿವಿರುವುದಾದರೂ ಪ್ರತಿಷ್ಠೆಯಿಂದ ಹಠ ಸಾಧಿಸಿದಾಗ ಗೆಲ್ಲಲು, ಉಳಿಯಲು ವಿವಿಧ ತಂತ್ರಗಳನ್ನು ಬಳಸುವುದು ಸಹಜ, ಶತ್ರುವಿನೊಂದಿಗೆ ಸಮರಕ್ಕಿಳಿದು ಕಾದಾಡುವ ಮುನ್ನ ಶತ್ರುಬಲದ ವಿವಿಧ ಆಯಾಮಗಳನ್ನು ಶಮನಗೊಳಿಸಿದಾಗ ಗೆಲವು ಸಾಧ್ಯ ಎಂಬುದು ಒಂದು ರಾಜತಂತ್ರ. ಅದರಂತೆ ಧರ್ಮ ಪಾಂಡವರ ಪರವಿದ್ದುದರಿಂದ ಶ್ರೀಕೃಷ್ಣ ಕೌರವರ ಪಕ್ಷದ ವೀರಕರ್ಣನ ಜನ್ಮರಹಸ್ಯವನ್ನು ಹೇಳಿ, ತನ್ನವರಿಗೆ ಆತನಿಂದ ಅಪಾಯವಾಗದಂತೆ ಮಾಡುವ ಹೃದಯವಿದ್ರಾವಕ ಸನ್ನಿವೇಶ **ಕೌರವೇಂದ್ರನ ಕೊಂದೆ ನೀನು** ಎಂಬ ಈ ಪದ್ಯಭಾಗದಲ್ಲಿ ಧ್ವನಿತವಾಗುತ್ತದೆ. ಪಾಂಡವರ ರಕ್ಷಣೆಗೆ ನಿಂತ ಕೃಷ್ಣ ಒಂದು ಕಡೆ ಸ್ವಾಮಿನಿಷ್ಠೆಗೆ ಬದ್ಧನಾದ ಕರ್ಣ ಇನ್ನೊಂದು ಕಡೆ. ಪ್ರಲೋಭನೆಗೆ ಒಳಗಾಗದೆ ಅಸಹಾಯಕನಾದ ಸ್ಥಿತಿಯಲ್ಲಿ ನೋವು, ಸಂಕಟದಿಂದ ಬಳಲುವ ಕರ್ಣನ ವ್ಯಕ್ತಿತ್ವದ ಹಿರಿಮೆ ಇಲ್ಲಿ ಬಿತ್ತರಗೊಂಡಿದೆ.

## ಪೂರ್ವಕಥೆ

ಧರ್ಮರಾಯನ ಮಯನಿರ್ಮಿತ ಅರಮನೆಯಲ್ಲಿ ಅವಮಾನಿತನಾದ ಕೌರವನು ಧರ್ಮರಾಯನನ್ನು ದ್ಯೂತಕ್ಕೆ ಆಹ್ವಾನಿಸಿ ಜೂಜಾಟದಲ್ಲಿ ಸೋಲಿಸುತ್ತಾನೆ. ದ್ಯೂತದ ಪಣದಂತೆ ಹನ್ನೆರಡು ವರ್ಷ ವನವಾಸ ಒಂದು ವರ್ಷ ಅಜ್ಞಾತವಾಸವನ್ನು ಯಶಸ್ವಿಯಾಗಿ ಮುಗಿಸಿಬಂದ ಪಾಂಡವರು ತಮ್ಮ ಪಾಲಿನ ರಾಜ್ಯವನ್ನು ಕೇಳುತ್ತಾರೆ. ಅಜ್ಞಾತವಾಸವು ಪೂರ್ಣವಾಗಿಲ್ಲ ಎಂಬ ನೆಪವನ್ನೊಡ್ಡಿ ಕೌರವನು ರಾಜ್ಯ ನೀಡಲು ನಿರಾಕರಿಸುತ್ತಾನೆ. ಸಂಧಾನದ ಮುಖೇನ ರಾಜ್ಯವನ್ನು ಮರಳಿ ಪಡೆಯುವ ಪ್ರಯತ್ನದಲ್ಲಿ ಧರ್ಮರಾಯ ಕೃಷ್ಣನನ್ನು ಸಂಧಿಗಾಗಿ ಕಳುಹಿಸುತ್ತಾನೆ. ಕಪಟನಾಟಕ ಸೂತ್ರಧಾರಿಯಾದ ಶ್ರೀಕೃಷ್ಣ ಸಂಧಿಯ ನೆಪದಲ್ಲಿ ದುರ್ಯೋಧನನ ಬಲವನ್ನು ಕುಗ್ಗಿಸುವ ಸಲುವಾಗಿ ಮೊದಲು ವಿದುರನಲ್ಲಿಗೆ ಬರುತ್ತಾನೆ. ಇದರಿಂದ ಕುಪಿತನಾದ ಕೌರವ ವಿದುರನನ್ನು ತುಂಬಿದ ಸಭೆಯಲ್ಲಿ ಹೀಗಳೆಯುತ್ತಾನೆ. ಸಿಟ್ಟುಗೊಂಡ ವಿದುರ ಅಪ್ರತಿಮವಾದ ತನ್ನ ಬಿಲ್ಲನ್ನು ಮುರಿದು ಯುದ್ಧದಿಂದ ವಿಮುಖನಾಗುತ್ತಾನೆ. ಸಂಧಿ ವಿಫಲಗೊಳ್ಳುತ್ತದೆ. ಯುದ್ಧವೇ ಸಿದ್ಧ ಎಂಬ ತೀರ್ಮಾನಕ್ಕೆ ಬರಲಾಗುತ್ತದೆ. ಕೌರವನ ಸೇನೆಯಲ್ಲಿ ಪಾಂಡವರನ್ನು ಕೊಲ್ಲಬಲ್ಲ ಇನ್ನೋರ್ವ ಬಲಶಾಲಿ ಕರ್ಣನಿಂದ ಪಾಂಡವರನ್ನು ರಕ್ಷಿಸಬೇಕೆಂದು ನಿರ್ಧರಿಸಿದ ಕೃಷ್ಣ ಅದಕ್ಕಾಗಿ ವೇದಿಕೆ ಸಿದ್ಧಪಡಿಸುತ್ತಾನೆ. ಆ ಸಂದರ್ಭವೇ ಪ್ರಕೃತ ಪಾಠಭಾಗ.



**ಇನತನೂಜನ ಕೂಡೆ ಮೈದುನ**
**ತನದ ಸರಸವನೆಸಗಿ ರಥದೊಳು**
**ದನುಜರಿಪು ಬರಸೆಳೆದು ಕುಳ್ಳಿರಿಸಿದನು ಪೀಠದಲಿ**
**ಎನಗೆ ನಿಮ್ಮಡಿಗಳಲಿ ಸಮಸೇ**
**ವನೆಯೆ ದೇವ ಮುರಾರಿಯಂಜುವೆ**
**ನೆನಲು ತೊಡೆಸೋಂಕಿನಲಿ ಸಾರಿದು ಶೌರಿಯಿಂತೆಂದ** ॥ 1 ॥

ಇನ+ತನೂಜನ ಕೂಡೆ ಮೈದುನತನದ ಸರಸವನೆಸಗಿ ರಥದೊಳು ದನುಜರಿಪು ಬರಸೆಳೆದು ಕುಳ್ಳಿರಿಸಿದನು ಪೀಠದಲಿ, ಎನಗೆ ನಿಮ್ಮ+ಅಡಿಗಳಲಿ ಸಮಸೇವನೆಯೆ ದೇವ ಮುರಾರಿ+ಅಂಜುವೆನು+ಎನಲು ತೊಡೆ ಸೋಂಕಿನಲಿ ಸಾರಿದು ಶೌರಿ+ಇಂತು+ಎಂದ.

## ಪದಗಳ ಅರ್ಥ

ಇನ–ಸೂರ್ಯ; ತನೂಜ–ಮಗ; (ಇನತನೂಜ–ಕರ್ಣ) ದನುಜ–ರಾಕ್ಷಸ; ರಿಪು–ಶತ್ರು; ಅಡಿ–ಪಾದ ; ಶೌರಿ–ಕೃಷ್ಣ ಮುರಾರಿ = ಮುರ+ಅರಿ; ಮುರ ಎಂಬ ರಾಕ್ಷಸನನ್ನು ವಧಿಸಿದವನು ಮುರಾರಿ, ಶ್ರೀಕೃಷ್ಣ

## ಸಾರಾಂಶ

ಕೃಷ್ಣನು , ಕರ್ಣನ ಜೊತೆಗೆ ಮೈದುನತನದ ಸಲುಗೆಯಿಂದ ಕೈಯಿಡಿದು ಎಳೆದುಕೊಂಡು ರಥದ ಆಸನದಲ್ಲಿ ಕುಳ್ಳಿರಿಸಿಕೊಂಡನು. ಆಗ ಕರ್ಣನು "ದೇವ ನಿಮ್ಮ ಪಾದದ ಕೆಳಗೆ ಕೂಡುವವನು ಇಂತವನಿಗೆ ಸಮಗೌರವವೇ ನನಗೆ ಭಯವಾಗುತ್ತಿದೆ." ಎಂದು ಹೇಳಿದಾಗ ತೊಡೆಗೆ ತೊಡೆ ಸೋಕುವಂತೆ ಕರ್ಣನ ಪಕ್ಕದಲ್ಲಿ ಕುಳಿತುಕೊಂಡು ಕೃಷ್ಣ ಹೀಗೆ ಹೇಳಿದನು.



**ಭೇದವಿಲ್ಲೆಲೆ ಕರ್ಣ ನಿಮ್ಮೊಳು**
**ಯಾದವರು ಕೌರವರೊಳಗೆ ಸಂ**
**ವಾದಿಸುವಡನ್ವಯಕೆ ಮೊದಲೆರಡಿಲ್ಲ ನಿನ್ನಾಣೆ**
**ಮೇದಿನೀಪತಿ ನೀನು ಚಿತ್ತದೊ**
**ಳಾದುದರಿವಿಲ್ಲೆನುತ ದಾನವ**
**ಸೂದನನು ರವಿಸುತನ ಕಿವಿಯಲಿ ಬಿತ್ತಿದನು ಭಯವ** ॥ **2** ॥

ಭೇದ+ಇಲ್ಲ ಎಲೆ ಕರ್ಣ ನಿಮ್ಮೊಳು ಯಾದವರು ಕೌರವರೊಳಗೆ ಸಂವಾದಿಸುವಡೆ+ಅನ್ವಯಕೆ ಮೊದಲು+ಎರಡು+ಇಲ್ಲ ನಿನ್ನ+ಆಣೆ ಮೇದಿನೀಪತಿ ನೀನು ಚಿತ್ತದೊಳ್+ಆದುದು+ಅರಿವಿಲ್ಲ+ಎನುತ ದಾನವಸೂದನನು ರವಿಸುತನ ಕಿವಿಯಲಿ ಬಿತ್ತಿದನು ಭಯವ.

## ಪದಗಳ ಅರ್ಥ

ಭೇದ–ವ್ಯತ್ಯಾಸ; ಅನ್ವಯ–ವಂಶ; ಮೇದಿನಿ–ಭೂಮಿ; ರವಿಸುತ–ಕರ್ಣ; ರವಿ–ಸೂರ್ಯ; ಸುತ–ಮಗ;ದಾನವ–ರಾಕ್ಷಸರು; ಸೂದನ–ವೈರಿ,(ದಾನವಸೂದ–ಕೃಷ್ಣ)
ಯಾದವರು = ಯದುವಿನ ವಂಶಸ್ಥರು. ಶ್ರೀಕೃಷ್ಣನು ಯದುವಂಶಕ್ಕೆ ಸೇರಿದವನು. ಶ್ರೀಕೃಷ್ಣನ ನಿರ್ಣಯಾನುಸಾರ ಯಾದವರು ಕುರುಕ್ಷೇತ್ರ ಯುದ್ಧದಲ್ಲಿ ದುರ್ಯೋಧನನ ಪರವಾಗಿ ಹೋರಾಡಿದರು.

## ಸಾರಾಂಶ

"ಎಲೈ ಕರ್ಣ ನಿಮ್ಮೊಳಗೆ(ಪಾಂಡವರು)ಯಾದವರು(ಕೃಷ್ಣನ ವಂಶದವರು) ಕೌರವರೊಳಗೆ ಯಾವುದೇ ವ್ಯತ್ಯಾಸ ಇಲ್ಲ. ವಂಶವನ್ನು ಪ್ರತಿಪಾದಿಸಿ ಹೇಳುವುದಾದರೆ ಮೊದಲೆರಡಿಲ್ಲ.(ಈ ವಂಶಗಳು ಪರಸ್ಪರ ಸಂಬಂಧಿಕರು) ನಿನ್ನಾಣೆಗೂ ನೀನು ಈ ಭೂಮಿಯ (ರಾಜ್ಯದ)ಒಡೆಯ, ನಿನ್ನ ಮನಸ್ಸಿನಲ್ಲಿ ಇದರ ಅರಿವು ಯಾವುದು ಇಲ್ಲ." ಎನ್ನುತ್ತ ಕರ್ಣನು ಕರ್ಣನ ಕಿವಿಯಲ್ಲಿ ದ್ವಂದ್ವ ಹೇಳಿಕೆಯನ್ನು ಬಿತ್ತಿದನು.

ಲಲನೆ ಪಡೆದೀಯೈದು ಮಂತ್ರಂ
ಗಳಲಿ ಮೊದಲಿಗ ನೀನು ನಿನ್ನಯ
ಬಳಿ ಯುಧಿಷ್ಠಿರದೇವ ಮೂರನೆಯಾತ ಕಲಿಭೀಮ
ಫಲುಗುಣನು ನಾಲ್ಕನೆಯಲೈದನೆ
ಯಲಿ ನಕುಲ ಸಹದೇವರಾದರು
ಬಳಿಕ ಮಾದ್ರಿಯಲೊಂದು ಮಂತ್ರದೊಳಿಬ್ಬರುದಿಸಿದರು ॥ 3 ॥



ಲಲನೆ ಪಡೆದ+ಈ+ಐದು ಮಂತ್ರಗಳಲಿ ಮೊದಲಿಗ ನೀನು ನಿನ್ನಯ ಬಳಿ ಯುದಿಷ್ಠಿರದೇವ ಮೂರನೆಯಾತ ಕಲಿಭೀಮ ಫಲುಗುಣನು ನಾಲ್ಕನೆಯಲಿ ಐದನೆಯಲಿ ನಕುಲಸಹದೇವರಾದರು ಬಳಿಕ ಮಾದ್ರಿಯಲಿ ಬಳಿಕ ಒಂದು ಮಂತ್ರದೊಳ್+ಇಬ್ಬರು ಉದಿಸಿದರು. ಲಲನೆ–ತರುಣಿ; ಬಳಿ–ಅನಂತರ; ಗದ್ದುಗೆ–ಪೀಠ; ಕಿಂಕರ–ಸೇವಕ; ಸಂತತಿ–ವಂಶ

**ಪದಗಳ ಅರ್ಥ**

ಲಲನೆ–ತರುಣಿ(ಕುಂತಿ); ಬಳಿ–ಅನಂತರ

**ಸಾರಾಂಶ**

"ಕುಂತಿ ಪಡೆದ ಐದು ಮಂತ್ರಗಳಲ್ಲಿ ಮೊದಲ ಮಂತ್ರದಲ್ಲಿ ನೀನು ಜನಿಸಿದೆ, ಅನಂತರ ಎರಡನೆಯ ಮಂತ್ರದಲ್ಲಿ ಧರ್ಮರಾಯ ,ಮೂರನೆಯಾತ (ಮೂರನೆಯ ಮಂತ್ರದಲ್ಲಿ) ಕಲಿಭೀಮಸೇನ, ನಾಲ್ಕನೆಯ ಮಂತ್ರದಿಂದ ಅರ್ಜುನ ಜನಿಸಿದನು. ಐದನೆಯ ಮಂತ್ರದಲ್ಲಿ ಮಾದ್ರಿ ನಕುಲ ಮತ್ತು ಸಹದೇವ ಇಬ್ಬರನ್ನು ಪಡೆದಳು".ಎಂದು ಕೃಷ್ಣ ಕರ್ಣನ ಹುಟ್ಟಿನ ಗುಟ್ಟನ್ನು ಹೇಳಿದನು.

**ಪೂರಕ ವಿಷಯ:** ಕುಂತಿ ದೂರ್ವಾಸ ಮುನಿಗಳ ಸೇವೆಯಲ್ಲಿದ್ದಾಗ ಐದು ಮಂತ್ರರೂಪದ ವರಗಳನ್ನು ಪಡೆದಿರುತ್ತಾಳೆ. ಮಂತ್ರಪರೀಕ್ಷೆಯ ಕುತೂಹಲವಾಗಿ ತರುಣಿ ಇದ್ದಾಗ ಸೂರ್ಯದೇವನನ್ನು ನೆನೆಯುತ್ತಾಳೆ ಆಗ ಕರ್ಣನು ಜನಿಸುತ್ತಾನೆ. ಭಯಗೊಂಡು ಆ ಮಗುವನ್ನು ನೀರಿನಲ್ಲಿ ಬಿಟ್ಟುಹೋಗಿರುತ್ತಾಳೆ. ಆ ಮಗುವನ್ನು ಸೂತನೊಬ್ಬ ಸಾಕುತ್ತಾನೆ. ಅವನೇ ಕರ್ಣ. ನಂತರ ಕುಂತಿ ಯಮದೇವನನ್ನು ನೆನೆದು ಧರ್ಮರಾಯನನ್ನು ,ಮೂರನೆಯದಾಗಿ ವಾಯುದೇವನನ್ನು ನೆನೆದು ಭೀಮಸೇನನನ್ನು ,ನಾಲ್ಕನೆಯದಾಗಿ ಇಂದ್ರದೇವನನ್ನು ನೆನೆದು ಅರ್ಜುನನನ್ನು ಪಡೆದಳು. ಉಳಿದ ಒಂದು ಮಂತ್ರವನ್ನು ತನ್ನ ತಂಗಿಯಾದ ಮಾದ್ರಿಗೆ (ಪಾಂಡುವಿನ ಎರಡನೆಯ ಹೆಂಡತಿ) ನೀಡಿದಳು, ಮಾದ್ರಿ ಅಶ್ವಿನಿ ದೇವತೆಯರನ್ನು ನೆನೆದಳು ಆಗ ನಕುಲ ಮತ್ತು ಸಹದೇವ ಇಬ್ಬರು ಮಕ್ಕಳು ಜನಿಸಿದರು.

ನಿನಗೆ ಹಸ್ತಿನಪುರದ ರಾಜ್ಯದ
ಘನತೆಯನು ಮಾಡುವೆನು ಪಾಂಡವ
ಜನಪ ಕೌರವ ಜನಪರೋಲೈಸುವರು ಗದ್ದುಗೆಯ
ನಿನಗೆ ಕಿಂಕರವೆರಡು ಸಂತತಿ
ಯೆನಿಸಲೊಲ್ಲದೆ ನೀನು ದುರಿಯೋ
ಧನನ ಬಾಯ್ದಂಬುಲಕೆ ಕೈಯಾನುವರೆ ಹೇಳೆಂದ ॥ 4 ॥

**ಪದಗಳ ಅರ್ಥ**

| |
|---|
| ಗದ್ದುಗೆ–ಪೀಠ; ಕಿಂಕರ–ಸೇವಕ; ಸಂತತಿ–ವಂಶ; ಎನಿಸಲೊಲ್ಲದ–ಇಷ್ಟಪಡದ, ಬಾಯ್ದಂಬುಲಕೆ–ಎಂಜಲಿಗೆ, ಕೈಯಾನು–ಕೈಚಾಚು |

**ಸಾರಾಂಶ**

ಕೃಷ್ಣನು " ಎಲೈ ಕರ್ಣನೆ ನಿನಗೆ ಹಸ್ತಿನಾಪುರದ ರಾಜ್ಯದ ಹಿರಿಮೆಯನ್ನು(ರಾಜನನ್ನಾಗಿ ಮಾಡುವೆನು) ಪಾಂಡವ ರಾಜರು ,ಕೌರವ ರಾಜರು ನಿನ್ನ ಪೀಠವನ್ನು ಓಲೈಸುತ್ತಾರೆ.(ಒಪ್ಪುತ್ತಾರೆ) ನಿನಗೆ ಈ ಎರಡು ವಂಶಗಳು ಸೇವೆ ಮಾಡುತ್ತಾರೆ. ಇದನ್ನು ಬಿಟ್ಟು ನೀನು ದುರ್ಯೋಧನನ ಬಾಯೆಂಜಲಿಗೆ ಕೈಚಾಚುವುದು ಸರಿಯೇ'' ಎಂದು ಹೇಳಿದನು.

**ಎಡದ ಮೈಯಲಿ ಕೌರವೇಂದ್ರರ**
**ಗಡಣ ಬಲದಲಿ ಪಾಂಡು ತನಯರ**
**ಗಡಣವಿದಿರಲಿ ಮಾದ್ರ ಮಾಗಧ ಯಾದವಾದಿಗಳು**
**ನಡುವೆ ನೀನೋಲಗದೊಳೊಪ್ಪುವ**
**ಕಡು ವಿಲಾಸವ ಬಿಸುಟು ಕುರುಪತಿ**
**ನುಡಿಸೆ ಜೀಯ ಹಸಾದವೆಂಬುದು ಕಷ್ಟ ನಿನಗೆಂದ ॥ 5 ॥**

| |
|---|
| ಎಡದ ಮೈಯಲಿ ಕೌರವ+ಇಂದ್ರರ ಗಡಣ ಬಲದಲಿ ಪಾಂಡು ತನಯರ ಗಡಣವು +ಇದಿರಲಿ ಮಾದ್ರ ಮಾಗಧ ಯಾದವ + ಆದಿಗಳು ನಡುವೆ ನೀನು + ಓಲಗದೊಳು + ಒಪ್ಪುವ ಕಡು ವಿಲಾಸವ ಬಿಸುಟು ಕುರುಪತಿ ನುಡಿಸೆ ಜೀಯ ಹಸಾದ + ಎಂಬುದು ಕಷ್ಟ ನಿನಗೆ + ಎಂದ. |

**ಪದಗಳ ಅರ್ಥ**

| |
|---|
| ಗಡಣ–ಸಮೂಹ; ಕಡು– ಅತಿ; ಹಸಾದ(ದ್ಭ)–ಪ್ರಸಾದ(ತ್ಸ) |

**ಸಾರಾಂಶ**

ಮುಂದುವರಿದು

ಕೃಷ್ಣ " ಕರ್ಣ ನಿನ್ನ ಎಡಕ್ಕೆ ಕೌರವೇಂದ್ರನ ಸಮೂಹ, ಬಲಕ್ಕೆ ಪಾಂಡುಪುತ್ರರ ಸಮೂಹವಿರಲು ಎದುರಿಗೆ ಮಾದ್ರ,ಮಾಗಧ,ಯಾದವರನ್ನು ಮೊದಲು ಮಾಡಿಕೊಂಡು ಇರುವಾಗ ನೀನು ಮಧ್ಯದಲ್ಲಿ ಕುಳಿತು ರಾಜಸಭೆಯಲ್ಲಿ ಪ್ರಕಾಶಿಸುವ ಅತಿಯಾದ ಸೊಬಗನ್ನು ಬಿಟ್ಟು ದುರ್ಯೋಧನ ಹೇಳಿದ ಮಾತಿಗೆ ಒಡೆಯ ಪ್ರಸಾದ(ಅನುಗ್ರಹ)ವಾಯಿತು ಎಂದು ಹೇಳುವುದು ನಿನಗೆ ಕಷ್ಟವಲ್ಲವೆ'' ಎಂದು ಹೇಳಿದನು.

**ಕೊರಳ ಸೆರೆ ಹಿಗ್ಗಿದವು ದೃಗುಜಲ**

**ಉರವಣಿಸಿ ಕಡು ನೊಂದನಕಟಾ**
**ಕುರುಪತಿಗೆ ಕೇಡಾದುದೆಂದನು ತನ್ನ ಮನದೊಳಗೆ**
**ಹರಿಯ ಹಗೆ ಹೊಗೆದೋರದುರುಹದೆ**
**ಬರಿದೆ ಹೋಹುದೆ ತನ್ನ ವಂಶವ**
**ನರುಹಿ ಕೊಂದನು ಹಲವು ಮಾತೇನೆಂದು ಚಿಂತಿಸಿದ** ॥ 6 ॥

| |
|---|
| ಕೊರಳ ಸೆರೆ ಹಿಗ್ಗಿದವು ದೃಗುಜಲ ಉರವಣಿಸಿ ಕಡು + ನೊಂದನು + ಅಕಟಾ ಕುರುಪತಿಗೆ ಕೇಡು + ಆದುದು + ಎಂದನು ಮನದ + ಒಳಗೆ ಹರಿಯ ಹಗೆ ಹೊಗೆ + ತೋರದೆ + ಉರುಹದೆ ಬರಿದೆ ಹೋಹುದೆ ತನ್ನ ವಂಶವನು + ಅರುಹಿ ಕೊಂದನು ಹಲವು ಮಾತು + ಏನು + ಎಂದು ಚಿಂತಿಸಿದ. |

**ಪದಗಳ ಅರ್ಥ**

| |
|---|
| ದೃಗುಜಲ–ಕಣ್ಣನೀರು; ಉರವಣಿಸು–ಹೆಚ್ಚಾಗು; ಕಡು–ಅತಿ; ಹಗೆ–ಶತ್ರು; ಅರುಹು–ಹೇಳು. |

**ಸಾರಾಂಶ**

ಕೃಷ್ಣನ ಮಾತನ್ನು ಕೇಳಿದ ಕರ್ಣನ ಕೊರಳ ನರಗಳು ಬಿಗಿದವು, ಕಣ್ಣೀರು ಹೆಚ್ಚಾಗಿ ಅತಿಯಾಗಿ ನೊಂದುಕೊಂಡನು. ಮನಸ್ಸಿನಲ್ಲಿ ಅಯ್ಯೋ ಕುರುಪತಿಗೆ ಕೇಡಾಯಿತಲ್ಲಾ ,ಕೃಷ್ಣನ ವೈರತ್ವದ ಬೆಂಕಿ (ಸಿಟ್ಟು) ಹೊರಗೆ ತೋರದೆ( ತನ್ನ ದ್ವೇಷವನ್ನು ಹೊರಗೆ ತೋರಿಸದೆ ತೀರಿಸಿಕೊಳ್ಳುವನಲ್ಲ ) ಸುಡದೆ ಹೋಗುವುದೇ(ಸುಡದೆ ಇರಲಾರದು). ತನ್ನ ವಂಶವನ್ನು ತಿಳಿಸಿ ನನ್ನನ್ನು ಕೊಂದು ಹಾಕಿದನು ಮುಂದೇನು ಮಾತಾನಾಡುವುದು ಎಂದು ಚಿಂತಾಕ್ರಾಂತನಾದನು.

**ಏನು ಹೇಳೈ ಕರ್ಣ ಚಿತ್ತ**
**ಗ್ಲಾನಿ ಯಾವುದು ಮನಕೆ ಕುಂತೀ**
**ಸೂನುಗಳ ಬೆಸಕೈಸಿಕೊಂಬುದು ಸೇರದೇ ನಿನಗೆ**
**ಹಾನಿಯಿಲ್ಲೆನ್ನಾಣೆ ನುಡಿ ನುಡಿ**
**ಮೌನವೇತಕೆ ಮರುಳುತನ ಬೇ**
**ಡಾನು ನಿನ್ನಪದೆಸೆಯ ಬಯಸುವನಲ್ಲ ಕೇಳೆಂದ** ॥ 7 ॥

| |
|---|
| ಏನು ಹೇಳೈ ಕರ್ಣ ಚಿತ್ತಗ್ಲಾನಿ ಯಾವುದು ಮನಕೆ ಕುಂತೀಸೂನಗಳ ಬೆಸಕೈಸಿಕೊಂಬುದು ಸೇರದೇ ನಿನಗೆ ಹಾನಿ + ಇಲ್ಲ + ಎನ್ನ + ಆಣೆ ನುಡಿ ನುಡಿ ಮೌನವು + ಏತಕೆ ಮರುಳುತನ ಬೇಡ + ಆನು ನಿನ್ನ + ಅಪದೆಸೆಯ ಬಯಸುವನು + ಅಲ್ಲ ಕೇಳು + ಎಂದ |

**ಪದಗಳ ಅರ್ಥ**

| |
|---|
| ಗ್ಲಾನಿ–ತಲ್ಲಣ; ಚಿತ್ತ–ಮನಸ್ಸು; ಸೂನುಗಳು–ಮಕ್ಕಳು |

**ಸಾರಾಂಶ**

ಕೃಷ್ಣನು “ ಏನು ಹೇಳು ಕರ್ಣ ಮನದಲ್ಲಿರುವ ತಲ್ಲಣ ಯಾವುದು ? ಕುಂತಿಯ ಮಕ್ಕಳಿಂದ ಸೇವೆ ಮಾಡಿಸಿಕೊಳ್ಳವುದು ಇಷ್ಟವಿಲ್ಲವೇ ? ಎನ್ನಾಣೆಗೂ ನಿನಗೆ ಯಾವುದೇ ನಷ್ಟವಿಲ್ಲ. ಮಾತನಾಡು ಮೌನವೇತಕೆ, ಭ್ರಮೆಗೊಳಗಾಗುವುದು ಬೇಡ. ನಾನು ನಿನಗೆ ಕೇಡನ್ನು ಬಯಸುವುದಿಲ್ಲ” ಎಂದು ಕೇಳಿದನು.

**ಮರುಳು ಮಾಧವ ಮಹಿಯ ರಾಜ್ಯದ**
**ಸಿರಿಗೆ ಸೋಲುವನಲ್ಲ ಕೌಂತೇ**
**ಯರು ಸುಯೋಧನರೆನಗೆ ಬೆಸಕೈವಲ್ಲಿ ಮನವಿಲ್ಲ**
**ಹೊರೆದ ದಾತಾರಂಗೆ ಹಗೆವರ**
**ಶಿರವನರಿದೊಪ್ಪಿಸುವೆನೆಂಬೀ**
**ಭರದೊಳಿರ್ದೆನು ಕೌರವೇಂದ್ರನ ಕೊಂದೆ ನೀನೆಂದ ॥ ೮ ॥**

| |
|---|
| ಮರುಳು ಮಾಧವ ಮಹಿಯ ರಾಜ್ಯದ ಸಿರಿಗೆ ಸೋಲುವನು + ಅಲ್ಲ ಕೌಂತೇಯರು ಸುಯೋಧನರು + ಎನಗೆ ಬೆಸಕೈವಲ್ಲಿ ಮನವು + ಇಲ್ಲ ಹೊರೆದ ದಾತಾರಂಗೆ ಹಗೆವರ ಶಿರವನು + ಅರಿದು + ಒಪ್ಪಿಸುವೆನು + ಎಂಬ + ಈ ಭರದೊಳು + ಇರ್ದೆನು ಕೌರವ + ಇಂದ್ರನ ಕೊಂದೆ ನೀನು + ಎಂದ |

**ಪದಗಳ ಅರ್ಥ**

| |
|---|
| ಮಹಿ–ಭೂಮಿ; ಬೆಸಕೈ–ಸೇವೆ ; ದಾತಾರ–ಒಡೆಯ ; ಹಗೆ–ವೈರಿ<br>ಮಾಧವ = ಮಾ–ಲಕ್ಷ್ಮೀ, ಧವ–ಧರಿಸಿದವ, ಲಕ್ಷ್ಮೀಯನ್ನು ಎದೆಯಲ್ಲಿ ಧರಿಸಿದವ–ವಿಷ್ಣು–ಇಲ್ಲಿ ಕೃಷ್ಣ (ಕೃಷ್ಣನು ವಿಷ್ಣುವಿನ ಅವತಾರ) |

**ಸಾರಾಂಶ**

ಆಗ ಕರ್ಣನು “ಹೇ ಮರುಳು ಮಾಧವ(ಕೃಷ್ಣ) ಈ ರಾಜ್ಯದ ಭೂಮಿಯ ಸಿರಿಗೆ(ಐಶ್ವರ್ಯಕ್ಕೆ) ಸೋಲುವವನಲ್ಲ, ಕುಂತಿಯ ಪುತ್ರರು , ದುರ್ಯೋಧನರಿಂದ ಎನಗೆ ಸೇವೆ ಮಾಡಿಸಿಕೊಳ್ಳವುದರಲ್ಲಿ ಮನಸ್ಸಿಲ್ಲ. ಕಾಪಾಡಿದ(ಸಾಕಿದ)ಒಡೆಯನಿಗೆ ಶತ್ರುಗಳ ಶಿರವನ್ನು ಕತ್ತರಿಸಿ ಒಪ್ಪಿಸುವೆನು ಎಂಬ ಭರದಲ್ಲಿ ಇದ್ದೆನು ಆದರೆ ಕೌರವೇಂದ್ರನನ್ನು (ದುರ್ಯೋಧನನ)ಕೊಂದೆ ನೀನು” ಎಂದು ಹೇಳಿದನು.

**ವೀರ ಕೌರವರಾಯನೇ ದಾ**
**ತಾರನಾತನ ಹಗೆಯೆ ಹಗೆ ಕೈ**
**ವಾರವೇ ಕೈವಾರವಾದಂತಹೆನು ಕುರುನೃಪತಿ**
**ಶೌರಿ ಕೇಳ್ಕೈ ನಾಳೆ ಸಮರದ**
**ಸಾರದಲಿ ತೋರುವೆನು ನಿಜಭುಜ**
**ಶೌರಿಯದ ಸಂಪನ್ನತನವನು ಪಾಂಡುತನಯರಲಿ ॥ ೯ ॥**

ವೀರ ಕೌರವರಾಯನೇ ದಾತಾರನ್ + ಆತನ ಹಗೆಯೆ ಹಗೆ ಕೈವಾರವೇ ಕೈವಾರ + ಆದಂತೆ + ಅಹೆನು ಕುರುನೃಪತಿ ಶೌರಿ ಕೇಳ್ಯೆ ನಾಳೆ ಸಮರದ ಸಾರದಲಿ ತೋರುವೆನು ನಿಜಭುಜ ಶೌರಿಯದ ಸಂಪನ್ನತನವನು ಪಾಂಡುತನಯರಲಿ.

**ಪದಗಳ ಅರ್ಥ**

ಕೈವಾರ–ಹೊಗಳಿಕೆ; ಶೌರಿಯ–ಶೌರ್ಯ

## ಸಾರಾಂಶ

ಮುಂದುವರಿದು, ಕರ್ಣನು "ವೀರ ಕೌರವರಾಯನೇ(ದುರ್ಯೋಧನ) ನನಗೆ ಒಡೆಯ,ಆತನ ವೈರಿಗಳು ನನಗೂ ವೈರಿಗಳೇ, ಆತನ ಹೊಗಳಿಯೇ ನನ್ನ ಹೊಗಳಿಕೆ (ಆತನನ್ನು ಹೊಗಳಿದರೆ ನನ್ನನ್ನು ಹೊಗಳಿದಂತೆ) ದುರ್ಯೋಧನ ಆದಂತೆ ಆಗುವೆನು ( ಆತನಿಗೆ ಆದದ್ದು ನನಗೂ ಆಗಲಿ) ಕೃಷ್ಣನೇ ಕೇಳು ನಾಳಿನ ಸಮರದಲ್ಲಿ , ಪಾಂಡುವಿನ ಪುತ್ರರಲ್ಲಿ ನನ್ನ ಭುಜಭಲದ ಪರಾಕ್ರಮವನ್ನು , ಅದರ(ಶೌರ್ಯದ) ಶ್ರೇಷ್ಠತೆಯನ್ನು ತೋರಿಸುತ್ತೇನೆ.

**ಮಾರಿಗೌತಣವಾಯ್ತು ನಾಳಿನ**
**ಭಾರತವು ಚತುರಂಗ ಬಲದಲಿ**
**ಕೌರವನ ಋಣ ಹಿಂಗೆ ರಣದಲಿ ಸುಭಟಕೋಟಿಯನು**
**ತೀರಿಸಿಯೆ ಪತಿಯವಸರಕ್ಕೆ ಶ**
**ರೀರವನು ನೂಕುವೆನು ನಿನ್ನಯ**
**ವೀರರೈವರ ನೋಯಿಸೆನು ರಾಜೀವಸಖನಾಣೆ ॥10॥**



ಮಾರಿಗೆ + ಔತಣವು + ಆಯ್ತು ನಾಳಿನ ಭಾರತವು ಚತುರಂಗ ಬಲದ ಕೌರವನ ಋಣ ಹಿಂಗೆ ರಣದಲಿ ಸುಭಟ ಕೋಟಿಯನು ತೀರಿಸಿಯೆ ಪತಿಯ + ಅವಸರಕ್ಕೆ ಶರೀರವನು ನೂಕುವೆನು ನಿನ್ನಯ ವೀರರು + ಐವರ ನೋಯಿಸೆನು ರಾಜೀವ ಸಖನ + ಆಣೆ

**ಪದಗಳ ಅರ್ಥ**

ಋಣ–ಹಂಗು ; ರಣ–ಯುದ್ಧ ; ಅವಸರ–ಅಗತ್ಯದ ಸಮಯ
ಚತುರಂಗಬಲ = ಆನೆ, ಕುದುರೆ, ರಥ, ಕಾಲಾಳುಗಳನ್ನೊಳಗೊಂಡ ಸೈನ್ಯ ಸಮೂಹ.
ರಾಜೀವ ಸಖ = ರಾಜೀವ–ಕಮಲ (ತಾವರೆ); ಸಖ–ಗೆಳೆಯ = ತಾವರೆಯ ಗೆಳೆಯ=ಸೂರ್ಯ.

## ಸಾರಾಂಶ

ಮುಂದುವರಿದು ಕರ್ಣನು " ಚತುರಂಗ (ಆನೆ,ಕುದುರೆ,ರಥ,ಕಾಲ್ದಳಗಳಿಂದ ಕೂಡಿದ ಸೈನ್ಯ) ಬಲದಿಂದ ಕೂಡಿದ ನಾಳಿನ ಮಹಾಭಾರತ ಯುದ್ಧದಲ್ಲಿ ಮೃತ್ಯುದೇವತೆಗೆ ಭೋಜನ ಕೂಟವಾಗುತ್ತದೆ. ಯುದ್ಧರಂಗದಲ್ಲಿ ಅಸಂಖ್ಯ ವೀರಯೋಧರನ್ನು ಕೊಂದು ಕೌರವನ ಋಣ ತೀರುವಂತೆ ಮಾಡುತ್ತೇನೆ. ಒಡೆಯನ ಅಗತ್ಯದ ಸಮಯಕ್ಕೆ ಆಗುವಂತೆ ನನ್ನ ಶರೀರವನ್ನು ತೆಜಿಸುತ್ತೇನೆ. ಸೂರ್ಯನ ಮೇಲಾಣೆ ನಿನ್ನ ಆ ವೀರರೌವರನು(ಪಾಂಡವರು) ನೋಯಿಸುವುದಿಲ್ಲ.

॥ಇತಿ ಪದ್ಯಂ ಸಮಾಪ್ತಿ॥

## ಪದ್ಯಪಾಠ – 07
## ವೀರಲವ

**–ಲಕ್ಷ್ಮೀಶ**



### ಕವಿ ಪರಿಚಯ

**ಲಕ್ಷ್ಮೀಶಕವಿ** : ಲಕ್ಷ್ಮೀಶ **ಕ್ರಿ.ಶ.1550** ರಲ್ಲಿ ಚಿಕ್ಕಮಗಳೂರು ಜಿಲ್ಲೆಯ ಕಡೂರು ತಾಲೂಕಿನ **ದೇವನೂರಿನಲ್ಲಿ** ಜನಿಸಿದನು. ಈತನಿಗೆ **ಲಕ್ಷ್ಮೀರಮಣ, ಲಕ್ಷ್ಮೀಪತಿ** ಎಂಬ ಹೆಸರುಗಳೂ ಇವೆ. **''ಜೈಮಿನಿಭಾರತ'' ವೆಂಬ** ಪ್ರಸಿದ್ಧ ಕೃತಿಯನ್ನು ಬರೆದಿದ್ದಾನೆ. ಲಕ್ಷ್ಮೀಶ ಕವಿಗೆ **ಉಪಮಾಲೋಲ, ಕರ್ಣಾಟಕವಿಚೂತವನಚೈತ್ರ** ಎಂಬ ಬಿರುದುಗಳಿವೆ.

**ವಾಲ್ಮೀಕಿ** : ಒಬ್ಬ ಬ್ರಹ್ಮರ್ಷಿ. ಪ್ರಚೇತಸನ ಮಗನಾದುದರಿಂದ ಪ್ರಾಚೇತಸ ಎಂಬ ಹೆಸರೂ ಇದೆ. ಯೌವನಾಸ್ಥೆಯಲ್ಲಿ ಬೇಡರ ಸಂಗಡ ಸೇರಿ ದಾರಿಗಳ್ಳನಾಗಿದ್ದ. ನಾರದ ಮಹರ್ಷಿಗಳ ಬೋಧನೆಯಿಂದ ರಾಮನಾಮ ಜಪಿಸುತ್ತಿದ್ದಾಗ ಈತನ ಮೈಮೇಲೆ ಹುತ್ತ (ವಲ್ಮೀಕ) ಬೆಳೆಯಿತು. ನಾರದ ಮಹರ್ಷಿಗಳಿಂದಾಗಿ ವಲ್ಮೀಕದಿಂದ ಹೊರಗೆ ಬಂದ ಈತನು **ವಾಲ್ಮೀಕಿ** ಎಂದು ಪ್ರಸಿದ್ಧನಾದನು.

ಆದಿಕವಿ ವಾಲ್ಮೀಕಿ ಸಂಸ್ಕೃತ ಭಾಷೆಯಲ್ಲಿ ರಾಮಾಯಣ ಮಹಾಕಾವ್ಯ ರಚಿಸಿದರು. ವ್ಯಾಸರು ಮಹಾಭಾರತವನ್ನು ರಚಿಸಿದರು. ಈ ಎರಡು ಕಾವ್ಯಗಳು ತ್ರಿಮೂರ್ತಿಗಳಲ್ಲಿ ಒಬ್ಬನಾದ ವಿಷ್ಣುವು **"ದುಷ್ಟರ ಸಂಹಾರಕ್ಕಾಗಿ, ಶಿಷ್ಟರ ರಕ್ಷಣೆಗಾಗಿ"** ಮಾನವ ರೂಪವನ್ನು ಧರಿಸಿ ಮಾಡಿದ ಕಾರ್ಯಗಳನ್ನುತಿಳಿಸಿಕೊಡುತ್ತವೆ. ಕನ್ನಡದಲ್ಲಿ ಕುಮಾರವ್ಯಾಸನು ಮಹಾಭಾರತವನ್ನು ರಚಿಸಿ ಕೃಷ್ಣಕತೆಯಾಗಿಸಿದ್ದಾನೆ. ಇವೆರಡು ಕಾವ್ಯಗಳಲ್ಲಿ ಬರುವ ಅನೇಕ ವಿಷ್ಣುಭಕ್ತರ ಶೌರ್ಯ, ಧೈರ್ಯ, ಸಾಹಸ, ಗುಣ ಸ್ವಭಾವಗಳನ್ನು ಸಹೃದಯರಿಗೆ ತಿಳಿಸಿಕೊಡುವ ಆಶಯದಿಂದ ಲಕ್ಷೀಶ ಕವಿಯು "ಜೈಮಿನಿ ಭಾರತ"ವನ್ನು ರಚಿಸಿದ್ದಾನೆ. ಇಲ್ಲಿ ಬರುವ ಕುಶಲವರ ಕತೆ ಸರಳವೂ ಸುಂದರವೂ ಆಗಿದೆ. ಶ್ರೀರಾಮನು ಕೈಗೊಂಡ ಅಶ್ವಮೇಧದ ಕುದುರೆಯನ್ನು ಬಾಲಸಹಜ ಕುತೂಹಲದಿಂದ ಲವನು ಕಟ್ಟುತ್ತಾನೆ. ಆ ಸಂದರ್ಭದ ಕಾವ್ಯಸೊಬಗನ್ನು ಪರಿಚಯಿಸುವುದು ಈ ಪದ್ಯದ ಆಶಯ.

**ಲವ** : ಶ್ರೀರಾಮನಿಂದ ಸೀತೆಯಲ್ಲಿ ಜನಿಸಿದ ಅವಳಿ ಮಕ್ಕಳಲ್ಲಿ ಚಿಕ್ಕವ. ಶ್ರೀರಾಮನಿಂದ ಪರಿತ್ಯಕ್ತಳಾದ ತುಂಬುಗರ್ಭಿಣಿ ಸೀತೆ ವಾಲ್ಮೀಕಿ ಆಶ್ರಮದಲ್ಲಿ ಆಶ್ರಯ ಪಡೆದ ಸಂದರ್ಭದಲ್ಲಿ ಜನಿಸಿದವ. ವಾಲ್ಮೀಕಿಯಿಂದ ರಚಿತವಾದ ರಾಮಾಯಣವನ್ನು ಅಣ್ಣ ಕುಶನ ಜೊತೆ ಸೇರಿ ಹಾಡುತ್ತಿದ್ದ.

**ಲಕ್ಷ್ಮೀಶ** ವಿರಚಿತ **ಜೈಮಿನಿಭಾರತ** ಕಾವ್ಯವನ್ನು **ದೇವುಡುನರಸಿಂಹ ಶಾಸ್ತ್ರೀ** ಮತ್ತು **ಬಿ.ಶಿವಮೂರ್ತಿ ಶಾಸ್ತ್ರೀ** ಇವರು ಸಂಪಾದಿಸಿದ್ದು ಅದರ ಇಪ್ಪತ್ತನೆಯ ಸಂಧಿಯಿಂದ ಈ ಭಾಗವನ್ನು ಆಯ್ಕೆ ಮಾಡಿಕೊಳ್ಳಲಾಗಿದೆ.

ನಮ್ಮ ಮಹಾಕಾವ್ಯಗಳಲ್ಲಿ ತಂದೆ–ಮಕ್ಕಳು ಬೇರೆಬೇರೆಯಾಗಿ ಬೆಳೆದು. ಯಾವುದೋ ಸಂದರ್ಭದಲ್ಲಿ ಮುಖಾಮುಖಿಯಾಗುವ ಸನ್ನಿವೇಶಗಳು ಇವೆ. ಪರಸ್ಪರರ ಸಂಬಂಧದ ಅರಿವಿರದೆ ಸಂಘರ್ಷಕ್ಕೆ ಮುಂದಾಗುವ ಪ್ರಸಂಗಗಳಿವೆ. ಅನಂತರ ಯಾರಿಂದಲಾದರೂ ಸಂಬಂಧ ತಿಳಿದಾಗ ಸಂಘರ್ಷ ಮರೆಯಾಗಿ ಹೊಂದಾಣಿಕೆ ರೂಪದ ಸುಖಾಂತ್ಯವಾಗುವ ಸಂದರ್ಭಗಳೇ ಹೆಚ್ಚು. **ಭೀಮ–ಘಟೋತ್ಕಚ, ಅರ್ಜುನ–ಬಭ್ರುವಾಹನ**. **ಕುಶಲವ–ಶ್ರೀರಾಮ** ಇವರ ಭೇಟಿ ಇಂತಹ ಪ್ರಸಂಗಗಳಿಗೆ ದೃಷ್ಟಾಂತಗಳು.

**"ಹುಟ್ಟುಗುಣ ಗಟ್ಟಹತ್ತಿದರೂ ಹೋಗದು"** ಎಂಬುದು ನಾಣ್ಣುಡಿ. ಪ್ರತಿಯೊಂದು ಜೀವಿಯೂ ಹುಟ್ಟಿನಿಂದಲೇ ಕೆಲವೊಂದು ಗುಣಗಳನ್ನು ಪಡೆದಿರುತ್ತದೆ. ಇದಕ್ಕೆ ಅದರ ವಂಶವಾಹಿನಿ ಕಾರಣವಾಗಿರುತ್ತದೆ. ಕ್ಷತ್ರಿಯ ಕುಮಾರನಾದ ಲವ ಹುಟ್ಟಿದ್ದು ಋಷ್ಯಾಶ್ರಮದಲ್ಲಿ, ಬೆಳೆದದ್ದು ಋಷಿಕುಮಾರರ ಜೊತೆಗೆ. ಆದರೂ ಅವನ ದೇಹದಲ್ಲಿ ಹರಿಯುತ್ತಿರುವುದು ಕ್ಷತ್ರಿಯ ಗುಣವುಳ್ಳರಕ್ತ. ಹೀಗಾಗಿ ಆಶ್ರಮಕ್ಕೆ ಬಂದ ಕುದುರೆಯ ಹಣೆಯಲ್ಲಿದ್ದ ಲೇಖನದ ಒಕ್ಕಣೆ ಓದಿಕ್ಷತ್ರಿಯ ಸಹಜಗುಣ ಅವನಲ್ಲಿ ಉದ್ದೀಪನಗೊಂಡ ಸನ್ನಿವೇಶವನ್ನು ಇಲ್ಲಿ ಕಾಣಬಹುದು.

## ಪೂರ್ವಕಥೆ

ರಾಮಾಯಣ, ಮಹಾಭಾರತ, ಭಾಗವತಗಳಲ್ಲಿ ಅನೇಕ ಸಾಹಸಿಗಳಾದ ಬಾಲಕರ ಕಥೆಗಳು ಇವೆ. ಅಂತಹವುಗಳಲ್ಲಿ. ಲವನ ಕತೆಯೂ ಒಂದು. ರಾವಣನನ್ನು ಸಂಹರಿಸಿ, ಅಯೋಧ್ಯೆಗೆ ಸೀತಾಸಮೇತನಾಗಿ ಬಂದ ರಾಮ ಪ್ರಜಾನುರಾಗಿಯಾಗಿ ರಾಜ್ಯಭಾರ ಮಾಡುತ್ತಿದ್ದನು. ಗರ್ಭಿಣಿಯಾದ ಸೀತೆ ಒಂದು ದಿನ ವಾಲ್ಮೀಕಿ ಮಹರ್ಷಿಗಳ ಆಶ್ರಮವನ್ನು ನೋಡಬೇಕೆಂಬ ಆಸೆಯನ್ನು ವ್ಯಕ್ತಪಡಿಸುತ್ತಾಳೆ. ಕಾಕತಾಳೀಯವಾಗಿ ಅದೇ ರಾತ್ರಿ ಪ್ರಜೆಯೊಬ್ಬ ಸೀತೆಯ ಬಗ್ಗೆ ಅವಮಾನದ ನುಡಿಗಳನ್ನು ಆಡುತ್ತಾನೆ. ಇದನ್ನು ತಿಳಿದ ರಾಮನು ತಮ್ಮನಾದ ಲಕ್ಷ್ಮಣನನ್ನು ಕರೆದು ತುಂಬುಗರ್ಭಿಣಿಯಾದ ಸೀತೆಯನ್ನು ಕಾಡಿನಲ್ಲಿ ಬಿಟ್ಟು ಬರುವಂತೆ ಆಜ್ಞಾಪಿಸುತ್ತಾನೆ. ಪ್ರಜೆಗಳ ಅಭಿಪ್ರಾಯವೇ ಸರ್ವಸ್ವವೆಂದು ತಿಳಿದ ರಾಮನ ಈ ಆಜ್ಞೆಯಂತೆ ಲಕ್ಷ್ಮಣ ವಾಲ್ಮೀಕಿ ಆಶ್ರಮಕ್ಕೆ ಹೋಗುವ ನೆಪದೊಂದಿಗೆ ಸೀತೆಯನ್ನು ಕಾಡಿಗೆ ಕೊಂಡೊಯ್ಯುತ್ತಾನೆ. ಕಾಡಿನಲ್ಲಿ ಏಕಾಂಗಿಯಾಗಿದ್ದ ಸೀತೆ ದುಃಖಿಸುತ್ತಿರುವ ಸಂದರ್ಭದಲ್ಲಿ ಆ ಪ್ರದೇಶಕ್ಕೆ ಬಂದ ವಾಲ್ಮೀಕಿ ಮಹರ್ಷಿಗಳು ಸೀತೆಯನ್ನು ತಮ್ಮಾಶ್ರಮಕ್ಕೆ ಕರೆದೊಯ್ಯುತ್ತಾರೆ. ಆಶ್ರಮದಲ್ಲಿ ಕೆಲವೇ ದಿನಕ್ಕೆ ಸೀತೆ ಅವಳಿ ಮಕ್ಕಳನ್ನು ಹಡೆಯುತ್ತಾಳೆ. ವಾಲ್ಮೀಕಿ ಮಹರ್ಷಿಗಳು ಈ ಮಕ್ಕಳಿಗೆ ಕುಶ, ಲವರೆಂದು ನಾಮಕರಣ ಮಾಡಿ ಸಕಲ ವಿದ್ಯಾಪಾರಂಗತರನ್ನಾಗಿ ಮಾಡುತ್ತಾರೆ.



ಇತ್ತ ಸೀತೆಯ ಅಗಲುವಿಕೆಯಿಂದ ರಾಮ ಮಾನಸಿಕವಾಗಿ ದುಃಖಕ್ಕೀಡಾಗುತ್ತಾನೆ. ರಾವಣನ ವಧೆಯಿಂದ ಬ್ರಹ್ಮಹತ್ಯಾದೋಷ ಬಂದಿರುವುದನ್ನು ಪರಿಹರಿಸಿಕೊಳ್ಳುವುದಕ್ಕಾಗಿ ಮಹರ್ಷಿಗಳ ಆದೇಶದಂತೆ ರಾಮ ಅಶ್ವಮೇಧವನ್ನು ಕೈಗೊಂಡು ಸಂಚಾರಕ್ಕೆ ತೆರಳಿದ ಕುದುರೆಯ ಬೆಂಗಾವಲಿಗೆ ಶತ್ರುಘ್ನನನ್ನು ಕಳುಹಿಸುತ್ತಾನೆ. ದೇಶದೇಶಗಳನ್ನು ಸುತ್ತಾಡಿದ ಅಶ್ವಮೇಧದ ಕುದುರೆ ಒಂದು ದಿನ ವಾಲ್ಮೀಕಿ ಆಶ್ರಮಕ್ಕೆ ಬರುತ್ತದೆ. ಶ್ರೀರಾಮನೇ ತನ್ನ ತಂದೆ ಎಂದು ತಿಳಿಯದ ಲವ ಕುದುರೆಯನ್ನು ಕಟ್ಟುವ ಸನ್ನಿವೇಶವೇ ಈ ಪಾಠ ಭಾಗ.

॥ 1 ॥

**ಬಲ್ಗಯ್ಯ ನೃಪರಂಜಿ ತಡೆಯದೆ ರಘೂದ್ವಹನ ।**
**ಸೊಲ್ಗೇಳಿ ನಮಿಸಲಿಳೆಯೊಳ್ ಚರಿಸುತಧ್ವರದ ।**
**ನಲ್ಗುದುರೆ ಬಂದು ವಾಲ್ಮೀಕಿಯ ನಿಜಾಶ್ರಮದ ವಿನಿಯೋಗದುಪವನದೊಳು ॥**
**ಪುಲ್ಗಳ ಪಸುರ್ಗೆಳಸಿ ಪೊಕ್ಕೊಡಾ ತೋಟಗಾ ।**
**ವಲ್ಗೆ ತನ್ನೊಡನಾಡಿಗಳ ಕೂಡಿ ಲೀಲೆ ಮಿಗೆ ।**
**ಬಿಲ್ಗೊಂಡು ನಡೆತಂದವಂ ಕಂಡನರ್ಚಿತ ಸುವಾಜಿಯಂ ವೀರಲವನು**

ಬಲ್ಗಯ್ಯ ನೃಪರ್+ಅಂಜಿ ತಡೆಯದೆ ರಘು+ಉದ್ವಹನ ಸೊಲ್+ಕೇಳಿ ನಮಿಸಲ್+ಇಳೆಯೊಳ್ ಚರಿಸುತ+ ಅಧ್ವರದ ನಲ್+ಕುದುರೆ ಬಂದು ವಾಲ್ಮೀಕಿಯ ನಿಜ+ಆಶ್ರಮದ ವಿನಿಯೋಗದ+ ಉಪವನದೊಳು ಪುಲ್ಗಳ ಪಸುರ್ಗೆ+ಎಳಸಿ ಪೊಕ್ಕೊಡೆ+ಆ ತೋಟ+ಕಾವಲ್ಗೆ ತನ್ನ+ಒಡನಾಡಿಗಳ ಕೂಡಿ ಲೀಲೆಮಿಗೆ ಬಿಲ್+ಕೊಂಡು ನಡೆತಂದ+ಅವಂ ಕಂಡನು+ಅರ್ಚಿತ ಸುವಾಜಿಯಂ ವೀರಲವನು.

## ಪದಗಳ ಅರ್ಥ

ನೃಪ–ದೊರೆ, ಅಂಜಿ–ಹೆದರಿ, ಚರಿಸು–ಸಂಚರಿಸು, ಉಪವನ–ಉದ್ಯಾನವನ, ಪಸುರು–ಹಸುರು.

**ರಘು** : ಸೂರ್ಯ ವಂಶದ ಅರಸ. ತನ್ನ ಪರಾಕ್ರಮದಿಂದ ಭೂಮಂಡಳವನ್ನು ಗೆದ್ದು **'ವಿಶ್ವಜಿತ್'** ಎಂಬ ಯಾಗ ಮಾಡಿ ಸರ್ವಸ್ವವನ್ನು ದಾನಮಾಡಿ ಪ್ರಸಿದ್ಧನಾದ. ಸೂರ್ಯವಂಶದ ಶ್ರೇಷ್ಠ ಅರಸನಾದ ಕಾರಣ ಈತನ ಕಾಲಾನಂತರ ಸೂರ್ಯವಂಶಕ್ಕೆ **ರಘುವಂಶ** ಎಂಬ ಹೆಸರು ಬಂತು.

## ಸಾರಾಂಶ

ಭುಜಭಲವುಳ್ಳ ದೊರೆಗಳೆಲ್ಲರೂ ಶ್ರೀರಾಮನ ಆಜ್ಞೆಯನ್ನು ಕೇಳಿ, ಹೆದರಿ ನಮಸ್ಕರಿಸಿ (ಕುದುರೆಗೆ) ಕಳುಹಿಸಲು, ಶ್ರೀರಾಮನ ಅಶ್ವಮೇಧ ಯಜ್ಞದ ಉತ್ತಮವಾದ ಕುದುರೆಯು ಭೂಮಿಯ ಮೇಲೆ ಸಂಚರಿಸುತ್ತ ವಾಲ್ಮೀಕಿಯ ವಾಸವಿದ್ದ(ಉಪಯೋಗಿಸುತ್ತಿದ್ದ) ಉದ್ಯಾನವನದ ಹಸುರನ್ನು ಬಯಸಿ ಹೊಕ್ಕಿತು. ಆಗ ಆ ತೋಟದ ರಕ್ಷಣೆಗೆ ಇದ್ದು. ತನ್ನ ಜೊತೆಗಾರರನ್ನು ಕೂಡಿ ಅತಿಶಯವಾಗಿ ಆಟವಾಡಿ ಬಿಲ್ಲು(ಬಾಣ)ವನ್ನು ಎತ್ತಿಕೊಂಡು ಬರುವಾಗ ವೀರಲವನು ಪೂಜಿಸಲ್ಪಟ್ಟ ಉತ್ತಮವಾದ ಕುದುರೆಯನ್ನು ಕಂಡನು.

॥ 2 ॥

**ಎತ್ತಣ ತುರಂಗಮಿದು ಪೊಕ್ಕು ಪೂದೋಟಮಂ ।**
**ತೊತ್ತಳದುಳಿದುದು ವಾಲ್ಮೀಕಿಮುನಿನಾಥನೇ ।**
**ಪೊತ್ತುಮಾರೈವುದೆಂದೆನಗೆ ನೇಮಿಸಿ ಪೋದನಬ್ಧಿಪಂ ಕರೆಸಲಾಗಿ ॥**
**ಮತ್ತೆ ವರುಣನ ಲೋಕದಿಂ ಬಂದು ಮುಳಿದಪನೆ**
**ನುತ್ತ ಹಯದೆಡೆಗೆ ನಡೆತಂದು ನೋಡಲ್ಕದರ ।**
**ನೆತ್ತಿಯೊಳ್ ಮೆರೆವ ಪಟ್ಟದ ಲಿಖಿತಮಂ ಕಂಡು ಲವನೋದಿಕೊಳುತಿರ್ದನು**

| |
|---|
| ಎತ್ತಣ ತುರಂಗಮ್+ಇದು ಪೊಕ್ಕು ಪೂದೋಟಮಂ ತೊತ್ತಳ+ತುಳಿದುದು ವಾಲ್ಮೀಕಿ ಮುನಿನಾಥನ್ +ಏಪೊತ್ತುಮ್+ಆರೈವುದು+ಎಂದು+ಎನಗೆ ನೇಮಿಸಿ ಪೋದನ್+ಅಬ್ಧಿಪಂ ಕರೆಸಲಾಗಿ, ಮತ್ತೆ ವರುಣನ ಲೋಕದಿಂ ಬಂದು ಮುಳಿದಪನ್+ಎನುತ್ತ ಹಯದ+ಎಡೆಗೆ ನಡೆತಂದು ನೋಡಲ್ಕೆ+ಅದರ ನೆತ್ತಿಯೊಳ್ ಮೆರೆವ ಪಟ್ಟದ ಲಿಖಿತಮಂ ಕಂಡು ಲವನ್+ ಓದಿಕೊಳುತ+ಇರ್ದನು. |

**ಪದಗಳ ಅರ್ಥ**

| |
|---|
| ತುರಂಗ–ಕುದುರೆ, ಮುಳಿ–ಕೋಪ, ಹಯ–ಕುದುರೆ, ನೆತ್ತಿ–ಹಣೆ, ಲಿಖಿತ–ಬರಹ. |
| **ವರುಣ** : ಅಷ್ಟದಿಕ್ಪಾಲಕರಲ್ಲಿ ಒಬ್ಬನಾದ ಈತ ಪಶ್ಚಿಮದಿಕ್ಕಿಗೆ ಒಡೆಯ. ಜಲಾಧಿಪತಿ ಎಂದು ಪ್ರಸಿದ್ಧನಾದವ. |
| **ಅಬ್ಧಿಪ** : ಅಬ್ಧಿ – ಸಮುದ್ರ, ಪ – ಒಡೆಯ, ಅಬ್ಧಿಪ – ಸಮುದ್ರದ ಒಡೆಯ – ವರುಣ |

**ಸಾರಾಂಶ**

ಯಾವ ಕಡೆಯ ಕುದುರೆ ಇದು,ಹೂತೋಟವನ್ನು ಹೊಕ್ಕು ನುಗ್ಗು ನುರಿಯಾಗುವಂತೆ ತುಳಿಯುತ್ತಿದಿಯಲ್ಲ. ವಾಲ್ಮೀಕಿ ಋಷಿಗಳು ತೋಟವನ್ನು ಒಣಗದಂತೆ ಹಾರೈಕೆಮಾಡುವುದು ಎಂದು ನನಗೆ ನೇಮಿಸಿ ವರುಣದೇವನು ಕರೆಯಲಾಗಿ ಹೋದನು. ಮತ್ತೆ ವರುಣನ ಲೋಕದಿಂದ ಬಂದು ಇದನ್ನು ನೋಡಿ ಕೋಪಗೊಳ್ಳುತ್ತಾರೆಂದು, ಕುದುರೆಯ ಕಡೆಗೆ ಬಂದು ನೋಡಲು ಅದರ ಹಣೆಯ ಮೇಲೆ ಮೆರೆವ ಪಟ್ಟದ ಬರೆಹವನ್ನು ಓದಿಕೊಳ್ಳುತ್ತಿದ್ದನು.

॥ 3 ॥



**ಉರ್ವಿಯೊಳ್ ಕೌಸಲ್ಯೆ ಪಡೆದ ಕುವರಂ ರಾಮ ।**
**ನೊರ್ವನೇ ವೀರನಾತನ ಯಜ್ಞತುರಗಮಿದು ।**
**ನಿರ್ವಹಿಸಲಾರ್ಪರಾರಾದೊಡಂ ತಡೆಯಲೆಂದಿರ್ದ ಲೇಖನವನೋದಿ ॥**
**ಗರ್ವಮಂ ಬಿಡಿಸದಿರ್ದೊಡೆ ತನ್ನ ಮಾತೆಯಂ ।**
**ಸರ್ವಜನಮುಂ ಬಂಜೆಯೆನ್ನದಿರ್ದಪುದೆ ತನ ।**
**ಗುರ್ವತೋಳ್ಗಳಿವೇತಕೆಂದು ಸಲೆ ವಾಸಿಯಂ ತೊಟ್ಟು ಲವನುರಿದೆದ್ದನು**

| |
|---|
| ಉರ್ವಿಯೊಳ್ ಕೌಸಲ್ಯೆ ಪಡೆದ ಕುವರಂ ರಾಮನ್+ಒರ್ವನೇ ವೀರನ್+ಆತನ ಯಜ್ಞತುರಗಮ್+ಇದ ನಿರ್ವಹಿಸಲ್+ಆರ್ಪರ್+ಆರ್+ಆದೊಡಂ ತಡೆಯಲಿ+ಎಂದು+ಇರ್ದ ಲೇಖನವನ್+ಓದಿ ಗರ್ವಮಂ ಬಿಡಿಸದೆ+ಇರ್ದೊಡೆ ತನ್ನ ಮಾತೆಯಂ ಸರ್ವ ಜನಮುಂ ಬಂಜೆ+ಎನ್ನದೆ+ಇರ್ದಪುದೆ ತನಗೆ+ಉರ್ವ+ತೋಳ್ಗಳ್+ಇವು+ಏತಕೆ+ಎಂದು ಸಲೆ ವಾಸಿಯಂ ತೊಟ್ಟು ಲವನ್+ಉರಿದು+ಎದ್ದನು. |

**ಪದಗಳ ಅರ್ಥ**

| |
|---|
| ಉರ್ವಿ–ಭೂಮಿ, ಆರ್ಪರ್–ಸಮರ್ಥರು, ಬಂಜೆ(ದ್ಭ)–ವಂಧ್ಯಾ (ತ್ಸ) – ಸಂತಾನವಿಲ್ಲದವಳು; ವಾಸಿ–ಪ್ರತಿಜ್ಞೆ |

## ಸಾರಾಂಶ

**"ಭೂಮಂಡಲದಲ್ಲಿ ಕೌಸಲ್ಯ ಪಡೆದ ಕುಮಾರ ಶ್ರೀರಾಮನೊಬ್ಬನೇ ವೀರನು ,ಆತನ ಯಜ್ಞನದ ಕುದುರೆ ಇದು. ನಿರ್ವಹಿಸಲು ಸಮರ್ಥರಾದವರು ಯಾರಾದರೂ ಇದ್ದರೆ ತಡೆಯಲಿ"** ಎಂದು ಇದ್ದ ಲೇಖನವನ್ನು ಓದಿ, ಇವನ ಅಹಂಕಾರವನ್ನು ಬಿಡಿಸದೆ ಇದ್ದರೆ ನನ್ನ ತಾಯಿಯನ್ನು ಎಲ್ಲಾ ಜನರೂ ಬಂಜೆ ಎನ್ನದೆ ಇರುವರೇ , ತನಗೆ ಇರುವ ಈ ತೋಳುಗಳು ಏತಕ್ಕೆ ಬೇಕು ಎಂದು ಪ್ರತಿಜ್ಞೆಯನ್ನು ಕೈಗೊಂಡು ಲವನು ಉರಿದೆದ್ದನು(ಆಕ್ರೋಶಗೊಂಡನು).

|| 4 ||



**ತೆಗೆದುತ್ತರೀಯಮಂ ಮುರಿದು ಕುದುರೆಯ ಗಳಕೆ ।**
**ಬಿಗಿದು ಕದಳೀದ್ರುಮಕೆ ಕಟ್ಟಲ್ಕೆ ಮುನಿಸುತರ್ ।**
**ಮಿಗೆ ನಡುಗಿ ಬೇಡಬೇಡರಸುಗಳ ವಾಜಿಯಂ ಬಿಡು ಬಡಿವರೆಮ್ಮನೆನಲು ॥**
**ನಗುತೆ ಪಾರ್ವರ ಮಕ್ಕಳಂಜಿದೊಡೆ ಜಾನಕಿಯ ।**
**ಮಗನಿದಕೆ ಬೆದರುವನೆ ಪೋಗಿ ನೀವೆಂದು ಲವ ।**
**ನಗಡುತನದಿಂದೆ ಬಿಲ್ದಿರುವನೇರಿಸಿ ತೀಡಿ ಜೇಗೈದು ನಿಂತಿರ್ದನು**

| |
|---|
| ತೆಗೆದು+ಉತ್ತರೀಯಮಂ ಮುರಿದು ಕುದುರೆಯ ಗಳಕೆ ಬಿಗಿದು ಕದಳೀದ್ರುಮಕೆ ಕಟ್ಟಲ್ಕೆ ಮುನಿಸುತರ್ ಮಿಗೆ ನಡುಗಿ ಬೇಡ ಬೇಡ ಅರಸುಗಳ ವಾಜಿಯಂ ಬಿಡು ಬಡಿವರ್+ಎಮ್ಮನ್+ಎನಲು ನಗುತೆ ಪಾರ್ವರ ಮಕ್ಕಳ್+ಅಂಜಿದೊಡೆ ಜಾನಕಿಯ ಮಗನ್+ಇದಕೆ ಬೆದರುವನೆ ಪೋಗಿ ನೀವ್+ಎಂದು ಲವನ್+ಅಗಡುತನ ದಿಂದೆ ಬಿಲ್+ತಿರುವನ್+ಏರಿಸಿ ತೀಡಿ ಜೇಗೈದು ನಿಂತು+ಇರ್ದನು. |

## ಪದಗಳ ಅರ್ಥ

| |
|---|
| ವಾಜಿ–ಕುದುರೆ, ಗಳ–ಕೊರಳು, ಕದಳಿ–ಬಾಳೆ, ಬಡಿ–ಹೊಡೆ, ಚಚ್ಚು, ಅಗಡು–ಶೌರ್ಯ. |

## ಸಾರಾಂಶ

ಲವನು ಉತ್ತರೀಯ(ಮೇಲುಹೊದಿಕೆ)ವನ್ನು ಉರಿಮಾಡಿಕೊಂಡು ಕುದುರೆಯ ಕೊರಳಿಗೆ ಬಿಗಿದು ಬಾಳೆಯ ಗಿಡಕ್ಕೆ ಕಟ್ಟಿದಾಗ ,ಅಲ್ಲಿದ್ದ ಮುನಿಗಳ ಮಕ್ಕಳೆಲ್ಲರು ಅಧಿಕವಾಗಿ ಹೆದರಿ ಬೇಡ ಬೇಡ ರಾಜರ ಕುದುರೆಯನ್ನು ಬಿಡು ನಮ್ಮನ್ನು ಅವರು ಬಡಿಯುತ್ತಾರೆ. ಎನ್ನಲು ನಗುತ್ತ ಬ್ರಾಹ್ಮಣರ ಮಕ್ಕಳು ಹೆದರಿದರೆ ಸೀತೆಯ ಮಗನು ಇದಕ್ಕೆ ಹೆದರುವನೆ,ಹೋಗಿ ನೀವು ಎಂದು ಲವನು ಶೌರ್ಯದಿಂದ ಬಿಲ್ಲಿನ ಹಗ್ಗವನ್ನು ಕಟ್ಟಿ,ಅದನ್ನು ಸವರಿ ಜೇಗೈದು ನಿಂತಿದ್ದನು.

**ಪೂರಕ**

**ಜೇಗೆಯ್** : ಬಿಲ್ಲಿಗೆ ಕಟ್ಟುವ ಹಗ್ಗವನ್ನು **ಹೆದೆ** ಎಂದು ಕರೆಯುತ್ತಾರೆ. ಈ ಹೆದೆಯನ್ನು ಬೇಕಾದಾಗ ಮಾತ್ರ ಬಿಗಿಯಲಾಗುತ್ತದೆ. ಉಳಿದ ಸಂದರ್ಭದಲ್ಲಿ ಬಿಲ್ಲಿನ ಒಂದು ತುದಿಯಲ್ಲಿ ಮಾತ್ರ ಕಟ್ಟಿರುತ್ತಾರೆ. ಯುದ್ಧಕ್ಕೆ ಸನ್ನದ್ಧನಾದಾಗ ಬಿಲ್ಲುಗಾರ ತನ್ನ ಬಿಲ್ಲಿನ ಹೆದೆಯನ್ನು ಅದರ ಇನ್ನೊಂದು ತುದಿಗೆ ಬಿಗಿಯಾಗಿ ಕಟ್ಟುತ್ತಾನೆ. ಈ ಹೆದೆಯ ಬಿಗಿತ ಸರಿಯಾಗಿದ್ದರೆ ಮಾತ್ರ ಬಾಣ ಗುರಿ ಮುಟ್ಟುತ್ತದೆ. ಅದಕ್ಕಾಗಿ ಬಿಲ್ಲುಗಾರ ಬಿಲ್ಲಿನ ಹೆದೆಯನ್ನು ಆಕರ್ಣಾಂತ (ಕಿವಿಯವರೆಗೆ) ಎಳೆದು ಬಿಡುತ್ತಾನೆ. ಆಗ ಆ ಹೆದೆ ಮೊದಲಿದ್ದ ಸ್ಥಳಕ್ಕೆ ಹೋಗುವಾಗ **'ಝೇಂ'** ಎಂಬ ಧ್ವನಿ ಮಾಡುತ್ತದೆ. ಈ ಧ್ವನಿಯ ಸಹಾಯದಿಂದ ಬಿಲ್ಲುಗಾರ ಹೆದೆಯ ಬಿಗಿತ ಸರಿಯಾಗಿದೆಯೇ ಎಂದು ಪರೀಕ್ಷಿಸುತ್ತಾನೆ. ಈ ಕ್ರಿಯೆಗೆ **'ಜೀಗೆಯ್ಯು'**ವುದು ಎಂದು ಹೇಳಲಾಗುತ್ತದೆ.

*****

## ಪದ್ಯಪಾಠ – ೦೪
## ಸಾರ್ಥಕತೆ

### 1. ಸಂಕಟಕೆ ಗಡಿ ಇಲ್ಲ

–ದು.ಸರಸ್ವತಿ

|  | **ಕವಿ ಪರಿಚಯ**<br>**ದುರ್ಗಪ್ಪ ಸರಸ್ವತಿ** ಅವರು 1963 ರಲ್ಲಿ ಬೆಂಗಳೂರಿನಲ್ಲಿ ಜನಿಸಿದರು. ದಲಿತ ಸಾಹಿತ್ಯ ಚಳವಳಿಯ ಪ್ರಮುಖಕವಯಿತ್ರಿ. ಬೆಂಗಳೂರಿನಲ್ಲಿ ನೆಲೆಸಿರುವ ಇವರು ರಂಗಕಲಾವಿದರಾಗಿ, ಸಮಾಜಸೇವಾಕರ್ತರಾಗಿ ದುಡಿಯುತ್ತಿದ್ದಾರೆ. **ಹೆಣೆದರೆ ಜೇಡನಂತೆ** ಮತ್ತು **ಜೀವಸಂಪಿಗೆ** ಎಂಬ ಕವನ ಸಂಕಲನಗಳನ್ನು **ಈಗೇನ್ಮಾಡೀರಿ**? ಎಂಬ ಅನುಭವ ಕಥನವನ್ನು ಪ್ರಕಟಿಸಿದ್ದಾರೆ. |
|---|---|

ದು. ಸರಸ್ವತಿ ವಿರಚಿತ **'ಹೆಣೆದರೆ ಜೇಡನಂತೆ'** ಕವನ ಸಂಕಲನದಿಂದ **'ಸಂಕಟಕೆ ಗಡಿ ಇಲ್ಲ'** ಕವಿತೆಯನ್ನು ಆಯ್ಕೆ ಮಾಡಿಕೊಳ್ಳಲಾಗಿದೆ.

'ಕೈಕೆಸರಾದರೆ ಬಾಯಿ ಮೊಸರು' ಎಂಬುದೊಂದು ಗಾದೆಮಾತು. ಕಷ್ಟ ಪಟ್ಟವನಿಗೆ, ಶ್ರಮಿಕನಿಗೆ ಸುಖವಿದೆ ಎಂಬುದು ಈ ಗಾದೆಯ ಅರ್ಥ. ಜಾತಿ, ಮತ ಮೌಢ್ಯಗಳ ಅಂಧಾನುಕರಣೆಯನ್ನು ಸಂಸ್ಕೃತಿ ಎಂದು ತಿಳಿದುಕೊಂಡ ಮುಗ್ಧರ ಶ್ರಮಕ್ಕೆ, ನೋವಿಗೆ ಬೆಲೆಯಿಲ್ಲ. ಶ್ರಮಿಕ ತನ್ನ ಶ್ರಮದ ಲಾಭವನ್ನು ಅನ್ಯರಿಗೆ ಕೊಟ್ಟು ನೋವನ್ನು ಅನುಭಸಿದ್ದಾನೆ. ಅನುಭವಿಸುತ್ತಲೂ ಇದ್ದಾನೆ. ಈ ನೋವು ಕಾಲದೇಶಗಳನ್ನು ದಾಟಿ ಹೋಗಿದೆಯಾದುದರಿಂದ ನೋವಿನ ವ್ಯಾಪ್ತಿ ಹಿರಿದಾದುದೆಂಬ ಲೇಖಕರ ಆಶಯವನ್ನು ತಿಳಿಸಿಕೊಡುವ ಪ್ರಯತ್ನ ಇಲ್ಲಿದೆ.

* * * * *

ಪ್ರಪಂಚದಲ್ಲಿ ಎಲ್ಲ ಪ್ರಾಣಿಗಳಿಗೂ ಬದುಕುವ ಹಕ್ಕಿದೆ. ನಿಸರ್ಗ ಸಮತೋಲನದಲ್ಲಿ ಎಲ್ಲ ಸ್ತರದ ಜೀವಿಗಳೂ ಅನಿವಾರ್ಯ. ಬುದ್ಧಿಶಕ್ತಿ, ಮಾತಿನ ಶಕ್ತಿಯಿಂದ ಮೇಲಿನವನೆಂದುಕೊಂಡಿರುವ ಮಾನವ ತಾನೇ ಸರ್ವಾಧಿಕಾರಿ, ತನಗೆ ಮಾತ್ರ ಭೂಮಿಯ ಹಕ್ಕಿದೆ ಎಂದು ಭ್ರಮಿಸಿದ್ದಾನೆ. ಅದೇ ಅಹಂಕಾರದಿಂದ ಗಡಿಯನ್ನು ನಿರ್ಮಿಸಿಕೊಂಡು ಭೇದಭಾವದ ಅಸಮಾನತೆಯನ್ನು ಸೃಷ್ಟಿಸಿದ್ದಾನೆ. ಇದರಿಂದಾದ ಕಾದಾಟದಲ್ಲಿ ಎಷ್ಟೋ ಜೀವಗಳು ನಾಶವಾಗಿವೆ. ಇದರಿಂದಾದ ಪರಿಣಾಮದ ಅಂತರಂಗದ ನೋವನ್ನು ಯಾರೂ ಕೇಳುವವರಿಲ್ಲ. ಅದನ್ನು ಅನುಭವಿಸಿದವರಿಗೆ ಮಾತ್ರ ವೇದ್ಯವಾಗುವಂಥದ್ದು.

## 1. ಸಂಕಟಕೆ ಗಡಿ ಇಲ್ಲ

ಮಾನವ ಎಂಬೋನು
ಮಣ್ಣಿಗೆ 'ಮಾಲೀಕ'
ಆದನೆಂಬ 'ಮತ್ತಿನಲಿ'
ಗೆರೆ ಎಳೆದು 'ಗಡಿ'
ಎಂದ
ಹಮ್ಮಿನಲಿ 'ಬೀಗಲು'
ಕಾದಾಟದಾಟ ಆಡಿದ
ಜೀವಗಳು ಶವವಾದವು
ಗಡಿ ಆಚೆ-ಈಚೆ
ಎರಡೂ ಕಡೆ
ಹರಿದ ನೆತ್ತರೊಂದೆ
ಆದರೂ
ಗಡಿಯ 'ಮ್ಯಾಜಿಕ್'ನಿಂದ
ಜೀವತೆತ್ತವರು
'ವೀರಮರಣ' ಹೊಂದಿದರು
ಜೀವ ತೆಗೆದವರು
'ವೀರಯೋಧ'ರಾದರು
ಒಡಲು ಅನುಭವಿಸುವ
ಸಂಕಟಕೆ
ಗಡಿಯೂ ಇಲ್ಲ
ಆಚೆ ಈಚೆಯೂ ಇಲ್ಲ
*****

ಮಾಲೀಕ-ಯಜಮಾನ, ಮತ್ತು-ಅಮಲು, ಗಡಿ-ಎಲ್ಲೆ, ಹಮ್ಮು-ಗರ್ವ, ಬೀಗು-ಗರ್ವಪಡು, ಶವ-ಹೆಣ, ನೆತ್ತರು-ರಕ್ತ, ಮ್ಯಾಜಿಕ್-ಇಂದ್ರಜಾಲ, ಯೋಧ-ಸೈನಿಕ, ಒಡಲು-ಶರೀರ.

### ಸಾರಾಂಶ

ಮಾನವನು ಭೂಮಿಯ ಯಜಮಾನನಾದೆ ಎಂಬ ಅಮಲಿನಲ್ಲಿ ಭೂಮಿಯ ಮೇಲೆ ಗೆರೆ ಎಳೆದು ಗಡಿಯನ್ನು ನಿರ್ಮಿಸಿಕೊಂಡನು.( **ಪೂರಕ ಅರ್ಥ**- ನಾನು, ನನ್ನದು, ನನ್ನ ಧರ್ಮ,ನನ್ನ ಜಾತಿ,ನನ್ನ ನೆಲ ಎಂಬ ಸಂಕುಚಿತ ಭೇದ ಭಾವನೆಯನ್ನು ಹೊಂದಿದನು.ನಂತರ ಅಸಮಾನತೆಯನ್ನು ಸೃಷ್ಠಿಸಿದನು.) ಈ ಗಡಿ ನನ್ನದು ಎಂದು ಗರ್ವಪಟ್ಟು ಕಾದಾಟ (ಯುದ್ಧ) ಮಾಡಿದ್ದರಿಂದ ಜೀವಿಗಳು ಶವವಾದವು. ಇದರಿಂದ ಗಡಿ ಆಚೆ – ಈಚೆ ಅನೇಕ ಜೀವಗಳು ಹೋರಾಡಿ ಶವವಾದವು. ಗಡಿಯ ಎರಡೂ ಕಡೆಯು ನೆತ್ತರು ಹರಿಯಿತು.

ಗಡಿ(ಇದು ನನ್ನ ನೆಲ) ಎಂಬ ಇಂದ್ರಜಾಲ (ಮೋಡಿ) ದಿಂದ ಕಾದಾಡಿದಾಗ ಜೀವವನ್ನು ಕಳೆದು ಕೊಂಡವರನ್ನು 'ವೀರ ಮರಣ' ಹೊಂದಿದವರೆಂದು ಕರೆದರು. ಅದೇ ಜೀವವನ್ನು ತೆಗೆದವರನ್ನು 'ವೀರಯೋಧರು' ಎಂದು ಕರೆದರು. ಇದರಿಂದಾಗಿ ಗಡಿಯ ಎರಡು ಕಡೆಯವರು ಅನುಭವಿಸಿದ ನೋವು, ಸಂಕಟ ಒಂದೇ ತೆರನಾದುದು ಎರಡು ಕಡೆಯಲ್ಲಿ ಜೀವತೆತ್ತವರು ಇದ್ದೆ ಇರುತ್ತಾರೆ. ಆದ್ದರಿಂದ ಈ ಶರೀರ(ಜೀವ) ಅನುಭವಿಸುವ ಸಂಕಟಕ್ಕೆ(ನೋವಿಗೆ) ಗಡಿ(ಎಲ್ಲೆ) ಇಲ್ಲ ಎಂಬುದು ಕವಿ ಅಭಿಪ್ರಾಯವಾಗಿದೆ. (ಯಾರಿಗೆ ನೋವಾದರೂ ಅದು ನೋವೆ ಅದರಲ್ಲಿ ಶತ್ರುಗಳಿಗೂ ಮಿತ್ರರರಿಗೂ ಎಂಬ ಬೇಧವೆಣಿಸುವುದಿಲ್ಲ.)

*****

## 2. ನನ್ನಾಸೆ

**–ಇಂದುಮತಿ ಲಮಾಣಿ**



**ಕವಿ ಪರಿಚಯ**

**ಇಂದುಮತಿ ಲಮಾಣಿ** ಅವರು (ಜನನ 1959) ವಿಜಯಾಪುರ ಜಿಲ್ಲೆ **ಬರಟಗಿಯ ಮೂರನೇ ತಾಂಡಾದವರು,** ದಲಿತಸಾಹಿತ್ಯ ಪ್ರಕಾರದ ಪ್ರಮುಖ ಕವಯಿತ್ರಿ. ಬಂಜಾರ ಸೇವಾ ಸಂಘದ ಅಧ್ಯಕ್ಷರು, ಮಹಿಳಾ ಸ್ನೇಹಸಾಹಿತ್ಯಸಂಗಮ ಸಂಘದ ಅಧ್ಯಕ್ಷರಾಗಿಯೂ ಸೇವೆ ಸಲ್ಲಿಸುತ್ತಿದ್ದಾರೆ. ಇವರಿಗೆ **'ಕಿತ್ತೂರು ರಾಣಿಚೆನ್ನಮ್ಮ ಪ್ರಶಸ್ತಿ'** (ಕರ್ನಾಟಕ ಸರ್ಕಾರ), **'ಡಾಟರ್ ಆಫ್ ನೈಲ್' ಪ್ರಶಸ್ತಿ** (ಟರ್ಕಿ), **ಮೈತ್ರೇಯಿ ಪ್ರಶಸ್ತಿ** (ಕುರ್ಜಾ), ಮುಂತಾದ ಅನೇಕ ಪ್ರಶಸ್ತಿಗಳು ಸಂದಿವೆ. **'ತಾಯಿಲೋಕ'** (ಕವನಸಂಕಲನ), **'ಭಾವಲೋಕ'** (ಜನಪದ ಕವನಸಂಕಲನ) **'ಏಕಾದಶ'** (ಕಥಾಸಂಕಲನ) **'ಕೊರಡು ಕೊನರುವುದು ಬರಡುಹಯನಹುದು'** (ಕಾದಂಬರಿ) ಮುಂತಾದಸಾಹಿತ್ಯದ ವಿವಿಧ ಪ್ರಕಾರಗಳಲ್ಲಿ ಕೃತಿಗಳನ್ನು ರಚಿಸಿ ಪ್ರಸಿದ್ಧರಾಗಿದ್ದಾರೆ.

**'ನನ್ನಾಸೆ'** ಕವನವನ್ನು ಇಂದುಮತಿ ಲಮಾಣಿ ಅವರ **'ನನ್ನ ಸುತ್ತಲಿನ ಸತ್ಯಗಳು'** ಎಂಬ ಕವನ ಸಂಕಲನ ದಿಂದ ಆಯ್ದುಕೊಳ್ಳಲಾಗಿದೆ.

ಪರೋಪಕಾರಾರ್ಥಂ ಇದಂ ಶರೀರಂ' ಎಂಬ ನುಡಿಯಂತೆ ಮನುಷ್ಯನ ಜೀವನ ಸಾರ್ಥಕವಾಗಲು ಆತನ ಬದುಕು ಹೇಗಿರಬೇಕೆಂಬ ಆಸೆ ಪ್ರತಿಯೊಬ್ಬರಲ್ಲೂ ಮೂಡುವುದು ಸಹಜ. ಹೀಗೆ ಬದುಕಿನ ಸಾರ್ಥಕತೆಯ ಆಸೆ ಕವಿಮನದ ಭಾವ ಇಲ್ಲಿ ಅರ್ಥಪೂರ್ಣವಾಗಿ ಮೂಡಿಬಂದಿದೆ. ನಮ್ಮ ಜೀವನ ಚೈತನ್ಯದಾಯಕವಾಗಿಯೂ ಆನಂದಮಯವಾಗಿಯೂ ಇರಬೇಕಾದಲ್ಲಿ ನಿಸ್ವಾರ್ಥವಾದ ತ್ಯಾಗಜೀವನ ನಮ್ಮದಾಗಿರಬೇಕು. ನಾವು ಇನ್ನೊಬ್ಬರ ಪಾಲಿಗೆ ದಾರಿದೀಪವಾದಾಗ, ನಮ್ಮ ಜೀವನದಲ್ಲಿ **'ಸಾರ್ಥಕ್ಯವನ್ನು'** ಪಡೆಯಬಹುದು ಎಂಬುದು ಈ ಕವನದ ಆಶಯವಾಗಿದೆ.

# 2. ನನ್ನಾಸೆ

ಗೆಲ್ಲಬೇಕು; ಬೀಸಲು ಬರುವ
ಬಲೆಯಿಂದ ಪಾರಾಗಬೇಕು
ತನ್ನನ್ನೇ ಸುಟ್ಟು –
ಬೆಳಕು ನೀಡುವ ಬತ್ತಿ ನಾನಾಗಬೇಕು.



ಮಣ್ಣಲ್ಲಿ ಮಣ್ಣಾಗಿ –
ಮಣ್ಣ ಮೇಲೊಂದು ಮರವಾಗಿ –
ಪುಣ್ಯವಂತರಿಗೆ ನೆರಳಾಗಬೇಕು.




ಬತ್ತದ ವರತೆ –
ಸದಾ ಚಿಮ್ಮುತ್ತಲಿರುವ ಚಿಲುಮೆ ನಾನಾಗಿ ;
ದಾಹಗೊಂಡವರ ತನುವ ತಣಿಸುವಂತಾಗಬೇಕು.
ಅಳುವ ಕಂದನ ನಗಿಸಲು
ಅಮ್ಮನ ಕಂಠದ ಜೋಗುಳ ನಾನಾಗಬೇಕು.
ಮಾನವನ ಅಜ್ಞಾನತೆ ತೊಲಗಿಸಲು –
ವಾಗ್ದೇವಿಯ ಕೈಯಲ್ಲಿಯ ಗ್ರಂಥ ನಾನಾಗಿ
ಧನ್ಯಳಾಗಬೇಕು...



ಮುಸ್ಸಂಜೆ ಹೊಸ್ತಿಲಲ್ಲಿ ದಿಕ್ಕಿಲ್ಲದೆ ನರಳಾಡುವ –
ದೀನರ ಊರುಗೋಲು ನಾನಾಗಬೇಕು....
ನೆಲಕ್ಕೆ ಬಿದ್ದು ಹೊರೆಯಾಗುವ ಮುನ್ನ
ಅಂತ್ಯ ನನ್ನದಾಗಬೇಕು.

ವರತೆ–ಚಿಲುಮೆ, ವಾಗ್ದೇವಿ–ಶಾರದೆ, ತೊಲಗಿಸು–ಹೋಗಲಾಡಿಸು, ತನು–ದೇಹ, ತಣಿಸು–ತೃಪ್ತಿಪಡಿಸು, ಪುಣ್ಯ(ತ್ಸ)–ಹೂನ್ಯ(ದ್ಭ).

**ಸಾರಾಂಶ**

ಒಳ್ಳೆಯ ಮನಸ್ಸಿನಿಂದ ಗೆಲ್ಲುವ ಛಲವೊಂದಿದ್ದರೆ ಮನುಷ್ಯ ಏನನ್ನಾದರೂ ಸಾಧಿಸಬಹುದು. ನಮ್ಮ ಬದುಕಿನಲ್ಲಿ ,ಕಾರ್ಯಸಾಧನೆಗಳಲ್ಲಿ ಸಾಕಷ್ಟು ಅಡ್ಡಿ ಆತಂಕಗಳು ಬರುತ್ತವೆ.(ಬಲೆಯಂತೆ ಎಣೆದು ಕೊಂಡಿರುತ್ತವೆ) ಅವುಗಳನ್ನು ಎದರಿಸಿ ಗೆದ್ದು (ಅಡ್ಡಿಆತಂಕಗಳಿಂದ) ಪಾರಾಗಬೇಕು. ತನ್ನನ್ನೆ ತಾನು ಸುಟ್ಟು ಕೊಂಡು ಬೆಳಕು ನೀಡುವ ಬತ್ತಿಆಗಬೇಕು (ಬೇರೆಯವರಿಗೆ ಒಳ್ಳೆಯದನ್ನು ಬಯಸಬೇಕು, ನೆರವಾಗಬೇಕು).ಮರಣದ ನಂತರವೂ ಮಣ್ಣಲ್ಲಿ ನಾನು ಮಣ್ಣಾಗಿ ಮಣ್ಣಿನ ಮೇಲೊಂದು ಮರವಾಗಿ ಹುಟ್ಟಿ ಪುಣ್ಯವಂತರಿಗೆ ನೆರಳಾಗಬೇಕು, ಬತ್ತಿ ಹೋಗದ ಚಿಲುಮೆಯಂತೆ ಸದಾ ಚಿಮ್ಮುವ ಚಿಲುಮೆ ನಾನಾಗಿ ಬಾಯಾರಿದವರ ದೇಹವ ತೃಪ್ತಿಪಡಿಸುವಂತೆ (ಆಯಾಸವ ನೀಗಿಸುವಂತೆ) ನಾನಾಗಬೇಕು.ಅಳುವ ಕಂದನನ್ನು ನಗಿಸಲು (ಸಮಧಾನ ಪಡಿಸಲು) ಅಮ್ಮನ ಕಂಠದ ಜೋಗುಳ ನಾನಾಗಬೇಕು, ಮಾನವರ ಅಜ್ಞಾನ,ಅನಕ್ಷರತೆಯನ್ನು ಹೋಗಲಾಡಿಸುವ ಸರಸ್ವತಿ ಕೈಯಲ್ಲಿನ ಪುಸ್ತಕ ನಾನಾಗಿ ಧನ್ಯಳಾಗಬೇಕು. ಮುಪ್ಪಿನ ವಯಸ್ಸಿನಲ್ಲಿ (ಮುದುರಾಗಿ) ಆಶ್ರಯವಿಲ್ಲದೆ ನರಳಾಡುವ (ದಿಕ್ಕುತೋಚದಿರುವ) ಅನಾಥರಿಗೆ ಊರುಗೋಲು ನಾನಾಗಬೇಕು. ನೆಲವನ್ನು ಹಿಡಿದು ಬೇರೆಯವರಿಗೆ ಹೊರೆಯಾಗುವುದಕ್ಕಿಂತ ಮುಂಚೆಯೆ(ಬೇರೆಯವರಿಂದ ಸೇವೆಯನ್ನು ಮಾಡಿಸಿಕೊಳ್ಳುವ ಮುಂಚೆ) ಅಂತ್ಯ(ಮರಣ) ನನ್ನದಾಗಬೇಕು, ಎಂದು ಕವಯತ್ರಿ ತನ್ನ ಮನದ ಆಶೆಗಳನ್ನು ಹೇಳಿದ್ದಾರೆ. ಅದೆ ರೀತಿಯಾಗಿ ನಾವು ಇಂತಹ ಮನಸ್ಸನ್ನು ಹೊಂದಿ ಸಾರ್ಥಕತೆ ಮೆರೆಯಬೇಕು.

**ಶುಭವಾಗಲಿ**

*****

